MYSORE HOMOEOPATHIC PRACTITIONERS' BILL, 1960.

Motion to consider.

Sri Dr. K. K. HEGDE (Minister for Health).—Sir, I beg to move :

"That the Mysore Homeopathic Practitioners Bill, 1960, be taken in to consideration."

Mr. SPEAKER.—Motion moved:

"That the Mysore Homeopathic Practitioners Bill, 1960, be taken into consideration."

† Sri K. K. HEGDE.—Sir, I do not think I need not go into the details of this Bill. It is a simple Bill. As stated in the Statement of Objects and Reasons, the Bill seeks to give recognition to the practitioners and associations of the Homeopathic System of Medicine, and to have a uniform law for regulation of the practice and education of this system of medicine in the State of Mysore.

As you are all aware, the main principles underlying this Bill are those which are incorporated in the Mysore Medical Practitioners Registration Bill. Clause 3 deals with the constitution of the Board. Five members of it are to be nominated and five are to be elected. It is provided that for a period of five years after the coming into force of this Bill, the President of the Board is to be nominated by the Government. Clause 10 deals with disqualification. Then there is provision for constitution of Court of Examiners for guiding the management of the institutions. The qualification of the members of the Court of Examiners are also given. Clause 18 provides for the constitution of the Registration Tribunal whose function it is to prepare the first register. All the provisions regarding disqualification, removal or reinstatement of members which are incorporated in the Mysore Medical Practitioners Registration Bill are included in this Bill. So, without going into further details. I commend this Bill to the House for its consideration.

†ಶ್ರೀ ಡಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಕೆ. ಕೆ. ಹೆಗ್ಗಡೆಯವರು 14 ವರ್ಷಗಳ ನಂತರ ಈಗ The Mysore Homeopathic Practitioners Bill 1960 ಎಂತ ಒಂದು ಬಿಲ್ಲನ್ನು ಈ ಸಭೆಯ ಮುಂದೆ ತಂದಿದ್ದಾರೆ. ಈ ಮಸೂದೆಯನ್ನು ಈ 14 ವರ್ಷಗಳ ಅವಧಿ ಮುಗಿಯುವುದರೊಳಗೇ ತಂದಿದ್ದರೆ ಚೆನ್ನಾಗಿತ್ತು.

ಶ್ರೀ ಕೆ. ಕೆ. ಹೆಗ್ಗಡೆ.—14 ವರ್ಷಕ್ಕೆ ಹಿಂದೆಯೇ ತಂದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶ್ರೀ ಡಿ. ಎನ್. ಪುಟ್ಟಣ್ಣ.—ಹೌದು. ಆದರೆ ಆಗಿನ್ನ ಸರ್ಕಾರವನ್ನು ನೀವು "ಇರ್ರೆಸ್‌ಪಾನ್ಸಿಬಲ್ ಸರ್ಕಾರ" ಎಂತ ಹೇಳುತ್ತಿದ್ದಿರಿ. ಆದರೆ ಈಗಿನ ನಿಮ್ಮ ರೆಸ್‌ಪಾನ್ಸಿಬಲ್ ಸರ್ಕಾರ ಬಂದ ಮೇಲೆ ಆದದ್ದಾದರೂ ಏನು ?

ಆಗಲಿ ಈಗ ನಮ್ಮ ಸರ್ಕಾರದವರೇನು ಈ ಒಂದು ಬಿಲ್ಲನ್ನು ಸಭೆಯ ಮುಂದೆ ತಂದಿದ್ದಾರೋ ಇದು ಬೊಂಬಾಯಿ ಸರ್ಕಾರದಲ್ಲಿರುವ ಹೋಮಿಯೋಪಥಿಕ್ ಆಕ್ಟಿನ "ಮಕ್ಕೀಕಾ ಮಕ್ಕಿ" ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗಿರುತ್ತದೆ. ನಮ್ಮ ಸರ್ಕಾರದವರು ಆ ಬೊಂಬಾಯಿ ಸರ್ಕಾರದಲ್ಲಿರುವ 1951ನೇ ಹೋಮಿಯೋಪಥಿಕ್ ಆಕ್ಟಿನ ಪ್ರತಿಯೊಂದು ಲೈನನ್ನೂ ಯಥಾವತ್ತು ಕಾಪಿ ಮಾಡಿಸಿದ್ದಾರೆಂಬುದು 23ನೇ ಪೇಜಿನಲ್ಲಿ ಹೇಳಿರತಕ್ಕ ವಾಕ್ಯಗಳಿಂದ ಚೆನ್ನಾಗಿ ಅರ್ಥವಾಗುತ್ತದೆ. ಅದನ್ನು ಸರ್ಕಾರದವರು ಮಾಡಲ್ ಆಗಿಟ್ಟುಕೊಂಡು ಮಾಡಿದ್ದೇವೆಂತಲಾದರೂ ಹೇಳಬಹುದು. ಕಾಪಿ ಮಾಡಿದ್ದೇವೆಂತಲಾದರೂ ಹೇಳಬಹುದು ಅಥವಾ ವರ್ಬ್ಯಾಟಿಂ ಕಾಪಿ ಮಾಡಿಸಿದ್ದೇವೆ, ಸೆಕೆಂಡ್ ಡಿವಿಜನ್ ಗುಮಾಸ್ತನ ಕೈಲಿ ಎಂತಲಾದರೂ ಹೇಳಬಹುದು. ಈ ಬಿಲ್ಲಿನಲ್ಲಿ ಅನೇಕ ಲೋಪದೋಷಗಳಿರುತ್ತವೆ. ಆದರೆ ನಾನೀಗ ಆ ಬೊಂಬಾಯಿ ಆಕ್ಟನ್ನು ದೂಷಣೆ ಮಾಡುತ್ತಿಲ್ಲ, ಆದರೆ ಆ ಬಿಲ್ಲನ್ನು ಏನೊಂದು ಮಾಡಲಾಗಿಟ್ಟುಕೊಂಡು ನಮ್ಮ ಸರ್ಕಾರದವರು ಈ ದಿವಸ ತಯಾರು ಮಾಡಿದ್ದಾರೋ ಈ ಬಿಲ್ಲಿನಲ್ಲಿ ಅನೇಕ ತಪ್ಪುಗಳಿವೆ. ಇದರಲ್ಲಿ ಫೈನಾನ್ಷಿಯಲ್ ಮೆಮೊರಾಂಡಂ ಕೊಟ್ಟಿಲ್ಲ. 14ನೇ ಕ್ಲಾಜಿನಲ್ಲಿ ರಿಜಿಸ್ಟ್ರಾರ್‌ರವರ ನೇಮಕದ ವಿಚಾರ ಹೇಳಿದ್ದಾರೆ. ಅವರಿಗೆ ಸಂಬಳ ಕೊಡತಕ್ಕವರು ಯಾರು ? ಒಂದು ವೇಳೆ ಸರ್ಕಾರದವರು ಹೇಳುವುದನ್ನೇ ನಾವು ಒಪ್ಪಿಕೊಂಡರೂ ಈ ಬಾಬಿನಲ್ಲಿ ಪ್ರತಿ ತಿಂಗಳು ಎಷ್ಟು ಜನ ರಿಜಿಸ್ಟರ್ ಮಾಡಿಸಿಕೊಳ್ಳುತ್ತಾರೆ ? ಈ ರಿಜಿಸ್ಟ್ರೇಷನ್ ಬಾಬಿನಿಂದ ಬರತಕ್ಕ ವರಮಾನ ಆ ರಿಜಿಸ್ಟ್ರಾರ್ ಅವರಿಗೆ ಪ್ರತಿ ತಿಂಗಳೂ ಕೊಡಬೇಕಾಗಿರುವ ಸಂಬಳಕ್ಕೆ ಸಾಕಾಗುತ್ತದೆಯೇ ಎಂದು ಕೇಳುತ್ತೇನೆ ? ಮಂತ್ರಿಗಳು Objects of Reasons ಸ್ಟೇಟ್‌ಮೆಂಟಿನಲ್ಲಿ ಹೇಳುವುದಿಲ್ಲ ರೀಜನಬಲ್ ಆಗಿರಬಹುದು, We trust the Minister, but not his words.

ಈಗ ಛಾಪ್ಟರ್ ಒಂದನ್ನು ತೆಗೆದುಕೊಳ್ಳೋಣ : ಇದರಲ್ಲಿ ಬೋರ್ಡಿನ ರಚನೆ ; ವಿಚಾರ ಹೇಳಿದ್ದಾರೆ. ಆದರೆ ಅದರ ಕೆಳಗಡೆ "Court" means the Court of Examiners Constituted under section 16 ಎಂತ ಹೇಳಿದ್ದಾರೆ. ಆದರೆ ಇಲ್ಲಿ ಈ 'Court' ಎಂಬ ಪದ ಚೆನ್ನಾಗಿಲ್ಲ. ಇದು ಅಷ್ಟು ಚೆನ್ನಾಗಿ ಸೌಂಡ್ ಕೊಡುವುದಿಲ್ಲ. Board of examiners ಎಂದಿದ್ದರೆ ಚೆನ್ನಾಗಿತ್ತು.

ಇನ್ನು ಎರಡನೆ ಛಾಪ್ಟರಿಗೆ ಬಂದರೆ, The Board shall consist of 11 members ಎಂತ ಹೇಳಿದ್ದಾರೆ. ಇದಕ್ಕೆ ಒಬ್ಬರು ಪ್ರೆಸಿಡೆಂಟರಿರಬೇಕೆಂದು ಹೇಳಲಾಗಿದೆ. ಆದರೆ ಯಾರೆಂಬುದನ್ನು ಖಚಿತವಾಗಿ ಹೇಳಿಲ್ಲ. A President who shall be a registerd Practitioner ಎಂತ ಅಷ್ಟೇ ಹೇಳಿದೆ. ಆದರೆ ಈ ಪ್ರಾಕ್ಟಿಷನರುಗಳಲ್ಲಿ ಗ್ರೂಪ್–A, ಗ್ರೂಪ್–B, ಮತ್ತು ಗ್ರೂಪ್–C ಎಂತ ಮೂರು ವಿಭಾಗ ಮಾಡಿದ್ದಾರೆ. ಈ ಮೂರು ಗ್ರೂಪುಗಳಿಂದ ಎಲ್ಲಿಂದಲಾದರೂ ಪ್ರೆಸಿಡೆಂಟ್ ಸ್ಥಾನಕ್ಕೆ ಚುನಾವಣೆ ಆಗಬಹುದೇ ಏನೆಂಬುದನ್ನು ಖಚಿತವಾಗಿ ಹೇಳಬೇಕಾಗಿತ್ತು.

2–30 P. M.

ಯಾವುದೇ ಆಗಲಿ ಮಸೂದೆಯಲ್ಲಿ ಸ್ಪೆಸಿಫಿಕ್ಕಾಗಿ ನಮೂದಿಸಲ್ಪಡಬೇಕು. 10 ವರ್ಷ ಸರ್ವಿಸ್ ಮಾಡಿರುವವರನ್ನು 4 ವರ್ಷ ಓದಿರುವವರನ್ನು, ಎರಡು ವರ್ಷ ಓದಿ ಕಡಮೆ ದರ್ಜೆಯಲ್ಲಿರುವವರನ್ನು ಎಲ್ಲಾ ಒಂದೇ ಎಂದು ಭಾವಿಸುವುದಕ್ಕೆ ಅವಕಾಶವಿರುವುದು ಸರಿಯಲ್ಲ. ಮಿಡ್‌ವೈಫ್ ಟ್ರೈನಿಂಗ್, ಕಾಂಪೌಂಡರ್ ಟ್ರೈನಿಂಗ್ ಇದ್ದಹಾಗೆ ಇರುವುದನ್ನು ಮಾಡಿರುವವರನ್ನು A list ನಲ್ಲಿರುವವರಿಗೆ ಸರಿಸಮವೆಂದು ಭಾವಿಸುವುದು ಸರಿಯಲ್ಲ. ಅವರನ್ನೇ ಪ್ರೆಸಿಡೆಂಟ್

ಮಾಡಬಹುದು. ಪ್ರತಿಯೊಬ್ಬರಿಗೂ ಓಟಿನ ಹಕ್ಕಿದೆ. ಆ list ನಲ್ಲಿರುವವರನ್ನು ಕಾಂಪೌಂಡರ ಟ್ರೈನಿಂಗ್, ಮಿಡ್‌ವೈಫ್ ಟ್ರೈನಿಂಗ್ ಪಾಸ್ ಮಾಡಿರುವವರನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೂಪರಿಂಟೆಂಡೆಂಟ್ ಮಾಡಬಹುದೇ ? ಆರೀತಿ ವೇಲ್ಯೂಜ್‌ಗೆ ಏರಿಸುವುದು ನ್ಯಾಯವಲ್ಲ ರಾ ಮಾಡಿದರೆ ಸರ್ವರಿಗೂ ಅನುಕೂಲವಾಗುವಂತೆ ಮಾಡಬೇಕು, ಸಾಧ್ಯವಾದಮಟ್ಟಿಗೆ ತಪ್ಪಿಲ್ಲದಂತೆ ಮಾಡಬೇಕು.

ಆಮೇಲೆ ಸರ್ಕಾರದಿಂದ ನಾಮಿನೇಟ್ ಮಾಡಲ್ಪಟ್ಟ 5 ಜನ ಮೆಂಬರುಗಳೇಕೆ ? ಅವರಿಗೆ ಅನುಭವವಿಲ್ಲ. 5 ವರ್ಷ ಕೆಲಸ ಮಾಡಿಬರಲಿ ಎಂದು ಹೇಳಬಹುದು. ಆದರೆ 5 ಜನ ಮುಂದಿನ ಎಲೆಕ್ಷನ್‌ಗೆ ನಿಲ್ಲದಿರಬಹುದು, ಒಂದು ವೇಳೆ ನಿಂತರೂ ಓಟು ಬಾರದೆ ಸೋಲಬಹುದು ನಾಮಿನೇಟ್ ಆದ 5 ಜನರು 5 ವರ್ಷ ಕೆಲಸಮಾಡುತ್ತಾರೆ. 5 ವರ್ಷ ಅನುಭವ ಪಡೆದಮೇಲೆ ಮುಂದೆ ಸೆಲೆಕ್ಟ್ ಮಾಡೋಣ ಎಂದಿರಬಹುದು. ಆದರೆ ಈ 5 ಜನ ನಾಮಿನೇಟ್ ಮಾಡುವುದನ್ನು ನೋಡಿದರೆ ಪ್ರಜಾಪ್ರಭುತ್ವಕ್ಕೆ ಇದಕ್ಕಿಂತ ಹೆಚ್ಚಿನ ಕೊಲೆ ಬೇರೆ ಇಲ್ಲ ಎಂದು ಹೇಳಬಹುದು. ಅರ್ಹರಾಗಿರುವ ಯೋಗ್ಯ ಜನರಿರುವಾಗ 4 ವರ್ಷ ಓದಿದವರನ್ನು, ಹೆಚ್ಚು ಅರ್ಹತೆಯಿಲ್ಲದವರನ್ನು ನಾಮಿನೇಟ್ ಮಾಡಿ 14 ವರ್ಷ ಪ್ರಾಕ್ಟೀಸ್ ಮಾಡಿರುವ ಹೋಮಿಯೋಪತಿಕ್ ಡಾಕ್ಟರುಗಳ ಮೇಲೆ ತಂದು ಕೂಡಿಸುವುದು ಸರಿಯೇ ?

ರಿಜಿಸ್ಟರ್ಡ್ ಪ್ರಾಕ್ಟಿಷನರ್ಸ್ ಎಂದರೆ A,B,C, ಲಿಸ್ಟುಗಳಲ್ಲಿ ಯಾವ ಲಿಸ್ಟಿನವರೆಂದು ಹೇಳಿಲ್ಲ. Law should be precise and perfect. 5 ಜನ ರಿಜಿಸ್ಟರ್ಡ್ ಪ್ರಾಕ್ಟೀಷನರ್ಸಿಂದ ಎಲೆಕ್ಟ್ ಮಾಡಲ್ಪಡುವವರು ಯಾರು ? ಅವರನ್ನೂ ನಾಮಿನೇಟ್ ಮಾಡಿ. ಇಲ್ಲದಿದ್ದರೆ ಪೂರ್ಣವಾಗಿ ಎಲೆಕ್ಷನ್‌ಮಾಡಿ. 5 ಜನ ನಾಮಿನೇಟ್ ಮಾಡುವುದಕ್ಕೆ ಬದಲಾಗಿ 11 ಜನರನ್ನು ಎಲೆಕ್ಟ್‌ಮಾಡಿ. ಅವರ ಪೈಕಿ ಒಬ್ಬರನ್ನು ಪ್ರೆಸಿಡೆಂಟ್ ಮಾಡಿಕೊಳ್ಳಲಿ, ತಾಲ್ಲೂಕು ಬೋರ್ಡಿನಲ್ಲಿರುವಂತೆ ಮಾಡಲಿ. ಮೊದಲು ಎಲೆಕ್ಟ್‌ಮಾಡಿದರೆ ಆಗ ಗಲಾಟೆಯಿರುವುದಿಲ್ಲ. ಈಗ ಮಾಡಿರುವ ಮಸೂದೆ ನೋಡಿದರೆ ಹೋಮಿಯೋಪತಿಕ್ ಡಾಕ್ಟರುಗಳನ್ನು ಕೊಲೆ ಮಾಡುವ ಉದ್ದೇಶ ತಮಗಿರುವಂತೆ ಕಾಣುತ್ತದೆ. ಈಗಿರುವ ಕಾನೂನಿನ ಪ್ರಕಾರ ಹೋಮಿಯೋಪತಿಕ್ ಡಾಕ್ಟರುಗಳು ತಲೆಯೆತ್ತಿಕೊಂಡು ತಿರುಗುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಮರ್ಯಾದೆ ಇಲ್ಲದಂತೆ ಮಾಡುಹಾಗೆ ಕಾಣುತ್ತದೆ. ಸರ್ಕಾರಕ್ಕೆ ಬೇಕಾದವರನ್ನು ನಾಮಿನೇಟ್ ಮಾಡುತ್ತಾರೆ. ಅಲೋಪತಿಕ್ ಡಾಕ್ಟರನ್ನೋ ಅಥವಾ ಆಯುರ್ವೇದಿಕ್ ಡಾಕ್ಟರನ್ನೋ ತಂದು ಹೋಮಿಯೋಪತಿಕ್ ಡಾಕ್ಟರುಗಳಮೇಲೆ ಕೂಡಿಸುತ್ತೀರಾ.

ಆ ಮೇಲೆ ರಿಜಿಸ್ಟ್ರಾರ್‌ರವರನ್ನು ನೇಮಕ ಕೊಡುತ್ತೀರಿ. ಹಾಗೆ ಮಾಡುವಾಗ ಎಷ್ಟು ಜನ ಹೋಮಿಯೋಪತಿಕ್ ಡಾಕ್ಟರುಗಳಿದ್ದಾರೆ. ಎಷ್ಟು ಜನರು ರಿಜಿಸ್ಟರ್ ಮಾಡಿಕೊಳ್ಳಬಹುದು ರಿಜಿಸ್ಟ್ರಾರ್‌ರವರ ಸಂಬಳವೆಷ್ಟು, ಅದನ್ನು ಯಾರುಕೊಡಬೇಕು, ಹಣವೆಲ್ಲಿಂದ ಬರುತ್ತದೆ, ರಿಜಿಸ್ಟರ್ ಮಾಡಿಕೊಳ್ಳುವುದರಿಂದ ಎಷ್ಟು ಹಣ ಬರುತ್ತದೆ ಅದು ರಿಜಿಸ್ಟ್ರಾರರ ಸಂಬಳ ಮತ್ತು ಅಲೋಯನ್ಸ್‌ಗೆ ಸಾಕಾಗುತ್ತದೆಯೆ, ಬೇಕಾದ ಪುಸ್ತಕಗಳು ವಗೈರೆಗೆ ಅದರಿಂದ ಬರುವ ಉತ್ಪತ್ತಿ ಸಾಕಾಗುತ್ತದೆಯೆ, ಸಾಲದಿದ್ದರೆ ಸರ್ಕಾರದಿಂದ ಸಬ್ಸಿಡಿ ಕೊಡಲಾಗುವುದೇ ಎಂಬುದನ್ನು ಸೂಚಿಸಿಲ್ಲ. ಫೈನಾನ್ಷಿಯಲ್ ಮೆಮೊರ್ಯಾಂಡಂ ಕೊಟ್ಟಿರುವುದು ದೊಡ್ಡ ಹ್ಯಾಂಡಿಕ್ಯಾಪ್ ಆಗಿದೆ. ರಿಜಿಸ್ಟ್ರಾರರಿಗೆ ಕನಿಷ್ಟ ಪಕ್ಷ ತಿಂಗಳಿಗೆ 500 ರೂಪಾಯಿಗಳನ್ನಾದರೂ ಕೊಡಬೇಕು. ಅದಕ್ಕೆ ಕಡಮೆ ಎಂದರೆ ಯಾರೂ ಬರುವುದಿಲ್ಲ. ಆಫೀಸ್ ಬಾಡಿಗೆ ಕೊಡಲು ರಿಜಿಸ್ಟ್ರೇಷನ್ನಿಂದ ಬರುವಹಣ ಸಾಕೆ ? ಇದನ್ನೆಲ್ಲಾ ಪರಿಶೀಲಿಸಬೇಕಾಗಿದೆ. ಹೋಮಿಯೋಪತಿಕ್ ಡಾಕ್ಟರೆಂದರೆ ಕೆಲಸಕ್ಕೆ ಬಾರದವರೆಂಬ ಭಾವನೆ ಬರಲು ಅವಕಾಶವಿರಬಾರದು.

(ಶ್ರೀ ಡಿ. ಎನ್. ಪುಟ್ಟಣ್ಣ)

ಕೋರ್ಟ್ ಆಫ್ ಎಗ್ಸಾಮಿನರ್ಸ್ ಎಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ. 16 ನೆಯ ಕ್ಲಾಜಿನಲ್ಲೂ ನಾಮಿನೇಷನ್ ವಿಚಾರವಿದೆ ಎಲ್ಲ ನೋಡಿದರೂ ನಾಮಿನೇಷನ್ ಇದ್ದೇ ಇದೆ. ದಯವಿಟ್ಟು ಇದನ್ನು ತೆಗೆಯಿರಿ. ನಾಮಿನೇಷನ್ ಬೇಡ. ಇದು ಅವರಲ್ಲಿ ತಂದಿಕ್ಕ ತಮಾಷೆ ನೋಡುವಂತಿದೆ. ಈಗ ತಾಲ್ಲೂಕು ಬೋರ್ಡ್ ಮತ್ತು ಅಸೆಂಬ್ಲಿಯಲ್ಲಿ ನಾಮಿನೇಷನ್ ಇದೆಯೇ? ಅಸೆಂಬ್ಲಿಗೆ ಒಂದ ಸ್ಥಾನಕ್ಕೆ ನಾಮಿನೇಟ್ ಕೊಡಬಹುದು.

ನಾಲ್ಕನೆಯ ಛಾಪ್ಟರ್ ನೋಡಿದರೆ ಅದರಷ್ಟು ವಿವೇಕ ಶೂನ್ಯವಾದ್ದನ್ನು ನೋಡಿಲ್ಲವೆಂದು ಹೇಳಬೇಕಾಗುತ್ತದೆ, ಅರ್ಥವೇ ಆಗುವುದಿಲ್ಲ. 17 ನೆಯ ಕ್ಲಾಜಿನ Part A ನಲ್ಲಿ ಹೇಳಿರುವಂತೆ 10 ವರ್ಷಗಳಿಗೆ ಕಡಿಮೆಯಿಲ್ಲದ ಪ್ರಾಕ್ಟೀಸ್ ಉಳ್ಳವರಾಗಿರಬೇಕೆಂದು ಹೇಳುವುದಕ್ಕೆ ಅಥಾರಿಟಿಯೇನಿದೆ ?

17ನೆಯ ಕ್ಲಾಜಿಗೆ ನಾನು ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಅದರಲ್ಲಿ A, B, C, D ಎಂದು ನಾಲ್ಕು ಭಾಗಗಳಿರಬೇಕೆಂದು ಸೂಚಿಸಿದ್ದೇನೆ. ಅದನ್ನು ಸರ್ಕಾರ ಒಪ್ಪಿದರೆ ಒಳ್ಳೆಯದು. A "This part shall include out of those persons who have undergone regular training in Homeopathic institution for not less than four years" ಎಂದು ಸೂಚಿಸಿದ್ದೇನೆ ಈ ಮಸೂದೆಯ 17 (2) (*b*) ನಲ್ಲಿ

> "Persons who have received personal clinical instruction for a period of not less than two years in a hospital where indoor patients are kept and where the service includes surgery, gynaecology and midwifery and homeopathic medicine and passed an examination in the said subjects approved by the Registration Tribunal"

ಇಂಥ ಆಸ್ಪತ್ರೆಗಳು ನಮ್ಮ ಮೈಸೂರು ದೇಶದಲ್ಲಿ ಎಷ್ಟಿವೆ? ಆಯುರ್ವೇದ ಸಂಬಂಧಪಟ್ಟ ಮಸೂದೆಯಲ್ಲಿ ಮೈಸೂರು ದೇಶದಲ್ಲಿ ಎಷ್ಟು ಸ್ಕೂಲುಗಳಿವೆ, ಎಷ್ಟು ಕಾಲೇಜುಗಳಿವೆ ಎಂಬ ವಿವರಗಳನ್ನು ಕೊಟ್ಟಿದೆ.; ಆದರೆ ಇದರಲ್ಲಿ ಏನೂ ಕೊಟ್ಟಿಲ್ಲ. ಬೊಂಬಾಯಿ ಕಾನೂನನ್ನು ಮಕ್ಕೀಕಾ ಮಕ್ಕಿಯಾಗಿ ಕಾಪಿ ಮಾಡಿದ್ದಾರೆ. ಅವರು ತಪ್ಪು ಮಾಡಿರಬಹುದು. ಹೀಗೆ ಸರ್ಕಾರ ನಮ್ಮ ಕಣ್ಣಿಗೆ ಮೆಣಸಿನಪುಡಿ ಹಾಕಿದರೆ ನಾವು ಒಪ್ಪುದವುಕ್ಕಾಗುತ್ತದೆಯೆ? ಇಂಡಿಯಾ ದೇಶದಲ್ಲಿ ಎರಡು ವರ್ಷ ಈ ಶಿಕ್ಷಣ ಕೊಡುವ ಹೋಮಿಯೋಪತಿಕ್ ಕಾಲೇಜಿವೆಯೆ?

Sri K. K. HEGDE.—After the training they will have to undergo this course ಎಂದು ಅರ್ಥ. Pre-clinical training ಅಲ್ಲ, clinical training.

ಶ್ರೀ ಡಿ. ಎನ್. ಪುಟ್ಟಣ್ಣ.—ಹೋಮಿಯೋಪತಿಯಲ್ಲಿ ಎರಡು ವರ್ಷ ಕ್ಲಿನಿಕಲ್ ಟ್ರೈನಿಂಗ್ ಕೊಡುವ ಕಾಲೇಜ್ ಇಂಡಿಯಾ ದೇಶದಲ್ಲಿಲ್ಲದೆಯಿರುವಾಗ ಅವರು ಎಲ್ಲಿ ಹೋಗಿ ಈ ಶಿಕ್ಷಣ ಪಡೆಯಬೇಕು? ಆದುದರಿಂದ Class B ಯನ್ನು ತೆಗೆದುಹಾಕಬೇಕು.

ಇನ್ನು Part C ಯಲ್ಲಿ

> "Other persons who have in practice of the homeopathic system of medicine as the principal occupation on the date of coming into force of this Chapter."

ಎಷ್ಟು ವರ್ಷ practice ಆಗಿರಬೇಕು? ಈ ಕಾನೂನು ಜಾರಿ ಬರುವ ದಿನ ಅವರು ಪ್ರಾಕ್ಟಿಸ್ ಮಾಡುತ್ತಿದ್ದರೆ ಎಂದಿದೆ. ಅವನು ಯಾವ ವೈದ್ಯ ಪದ್ಧತಿಯನ್ನು ಓದಿದ್ದಾನೆ ಎಂಬುದನ್ನೂ ತಿಳಿದುಕೊಳ್ಳದೆ, ಸುಮ್ಮನೆ ಅವನು ಪ್ರಾಕ್ಟಿಸ್ ಮಾಡುತ್ತಿದ್ದರೆ ಸಾಕು ರಿಜಿಸ್ಟರ್ ಮಾಡ

ಬಹುದೆಂದು ಮಾಡಿದರೆ ಕಷ್ಟವಾಗುತ್ತದೆ. ಎಲ್ಲಯೂ ಶಿಕ್ಷಣ ಹೊಂದದಿರುವವನು ಯಾವುದೋ ವನಸ್ಪತಿಗಳನ್ನು ರೋಗಿಗಳಿಗೆ ಕೊಟ್ಟು ವೈಕುಂಠಯಾತ್ರೆ ಮಾಡಿಸಿಬಿಡಬಹುದು,

> " Provided that the entries of the names of persons in part C shall be provisional and their names shall be removed from the register unless they pass only the third and final examination in the subjects specified in part I and part II for the diploma etc. "

ಎಂದಿದೆ. subject to passing ಎಂದೇಕೆ ಮಾಡಬೇಕು? unless a man is qualified fully, he should not be registered. ಇದು 'ಕೂಸು ಹುಟ್ಟುವುದಕಿಂತ ಮುಂಚೆ ಕುಲಾವಿ ಹೊಲಿಸಿದರು' ಎನ್ನುವ ಹಾಗಾಯಿತು.

ಶ್ರೀ ಜಿ. ವೆಂಕಟೇಗೌಡ.—ಅವನು qualified ಅಲ್ಲದಿದ್ದರೆ ಅವನಿಗೆ ಬೆಲೆ ಇರುವುದಿಲ್ಲ.....

ಶ್ರೀ ಜಿ. ಎನ್. ಪುಟ್ಟಣ್ಣ.—ಯಾರು ಸರಿಯಾಗಿ ಓದಿಕೊಂಡು ಪಾಸು ಮಾಡಿಕೊಂಡು ಬಂದಿರುತ್ತಾರೋ ಅವರು ಬೋರ್ಡ್ ಹಾಕಿರುವುದೇ ಇಲ್ಲ; ಅವರೂ ಅವರ ಹತ್ತಿರ ಜನರು ತುಂಬಿರುತ್ತಾರೆ. ಯಾರಿಗೆ ವಿದ್ಯೆ ಇರುವುದಿಲ್ಲವೋ ಅವರು ದೊಡ್ಡ ಬೋರ್ಡ್ ಹಾಕಿರುತ್ತಾರೆ. ಬುದ್ಧಿಯಿಲ್ಲದ ರಾಯರು ದೊಡ್ಡ ಬೋರ್ಡ್ ಹಾಕಿರುತ್ತಾರೆ, ಬುದ್ಧಿಯಿರುವವರು ಬೋರ್ಡನ್ನೇ ಹಾಕುವುದಿಲ್ಲ.

Registration Tribunal ನಲ್ಲಿ 18(1)ರಲ್ಲಿ " for the purpose of the preparation of the first register, the state Government may by notification constitute a Registration Tribunal consisting of three persons out of whom two shall be persons who are entitled to have their names entered in the register, and shall appoint a Secretary of the Tribunal, ಎಂದಿದೆ. which Register and which part is not clear. ಮಕ್ಕೀ ಕಾ ಮಕ್ಕಿ ಬೊಂಬಾಯಿ ಕಾನೂನನ್ನು ಕಾಪಿ ಮಾಡಿದ್ದಾರೆ. I say that he must be a registered person fully qualified by having undergone training for a period of four years in a recognised institution in India..........

ಶ್ರೀ ಕೆ. ಕೆ. ಹೆಗ್ಗಡೆ.—Chaper 1 ನಲ್ಲಿ ಏನಿದೆ ನೋಡಿ.

Sri G. N. PUTTANNA —"Register" means a register of practioners prepared and maintained under this Act. This is what I am saying. All the three clauses will be registered.

Sri K. K. HEGDE.—Such of the members who were entitled to be registered.

ಶ್ರೀ ಜಿ. ಎನ್. ಪುಟ್ಟಣ್ಣ.—ಇನ್ನೊಂದು ಸಾರಿ ನೋಡಿ.

> " for the purpose of preparation of the first register, the state Government may be notification constitute a Registration Tribumal consisting of three persons out of whom two shall be persons who are entitled to have their names entered in the register " ಎಂದಿದೆ.

ಯಾವ ಪಟ್ಟಿಯಲ್ಲಿ. 'ಎ'ನಲ್ಲೋ 'ಬಿ'ನಲ್ಲೋ 'ಸಿ'ನಲ್ಲೋ ? ಯಾವುದರಲ್ಲಾದರೂ ಆಗಬಹುದೆಂದರೆ ಬಹಳ ಅನ್ಯಾಯವಾಗುತ್ತದೆ. ಯಾವಾಗ ಮೂರು ಪಾರ್ಟುಗಳಲ್ಲಿರುವವರಿಗೂ ಬರುವ ಅಧಿಕಾರವಿದೆಯೋ ಆಗ 'ಸಿ' ಭಾಗದವರೂ ಬಂದೇ ಬರುತ್ತಾರೆ. ನಾಮಿನೇಷನ್ ಮಾಡಬಾರದು.........

Sri K. K. HEGDE.—Why do you presume such persons are from C list ?

ಶ್ರೀ ಜಿ. ಎನ್. ಪುಟ್ಟಣ್ಣ.—ದಯವಿಟ್ಟು ಸರಿಯಾಗಿ ಅದನ್ನು ಓದಿ ತಿಳಿದುಕೊಳ್ಳಿ.

"for the purpose of preparation of the first register etc."

ಆಮೇಲೆ ಕ್ಲಾಸ್ 17 "preparation of first Register" ಇದರಲ್ಲಿ ಯಾರಿಗೆ ಹೋಮಿಯೋಪತಿಕ್ ಡಾಕ್ಟರಾಗಬೇಕೆಂದು ಇಚ್ಛೆ ಇದೆಯೋ ಅಂಥವರು ಕ್ಲಾಸ್ (*a*) (*b*) (*c*) ಪ್ರಕಾರ ತನ್ನ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಇದೆ. ಅದರ ಪ್ರಕಾರ ಇದಕ್ಕೆ ಎಂಟರಾಗತಕ್ಕ ಹೋಮಿಯೋಪತಿಕ್ ಡಾಕ್ಟರೆಲ್ಲಾ ಹೋಪ್ ಬಿಟ್ಟಹಾಗೆ ಆಗುತ್ತದೆ. ಸರ್ಕಾರದವರು ಅಂತೂ ಇಂತೂ ನಾಮಿನೇಷನ್ನು ಅನುಕೂಲಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡುತ್ತಿದ್ದಾರೆ.

Sri K. K. HEGDE.—Why should you presume that the Government will nominate ?

Sri G. N. PUTTANNA.—Then how do you elect these people ? or Who will nominate why these are silent ?

Sri K. K. HEGDE.—No election; nomination for the first time. Why for what reasons ?

Sri G. N. PUTTANNA.—There should be no nomination. ಎಲೆಕ್ಷನ್ ಮಾಡುವವರು ನಾವು ನೀವಲ್ಲ. ಅದಕ್ಕೆ ಸಂಬಂಧಪಟ್ಟ ಪರ್ಸನ್ಸ್ ಎಲೆಕ್ಟ್ ಮಾಡುತ್ತಾರೆ. ಪ್ರಿಸೈಡಿಂಗ್ ಆಫೀಸರ್ಸ್ ಪ್ರಿಸೈಡ್ ಮಾಡುತ್ತಾರೆ. ಆಮೇಲೆ ಸೆಕ್ಷನ್ (24) ಕ್ಲಾಸ್ ಒಂದರಲ್ಲಿ "each registered Practitioner shall pay to the Board on or before the thirty-first day of December of every year a renewal fee of two rupees for the continuance of his name in the register. ಎಂದು ಇದೆ. ರಿನ್ಯೂಯಲ್ ಫೀಜ್ ಎರಡು ರೂಪಾಯಿ ಎಂದು ಹಾಕಿರುವುದು ಸರಿಯಾಗಿಲ್ಲ. ಈ ರಿನ್ಯೂಯಲ್‌ಗೆ ಏನಾದರೂ ಅರ್ಥವಿದೆಯೇ ? ಒಂದು ಗನ್ ಲೈಸನ್ಸ್ ರಿನ್ಯೂ ಮಾಡಬೇಕಾದರೆ ಐದು ರೂಪಾಯಿ ಚಾರ್ಜ್ ಮಾಡುತ್ತಾರೆ. ಹೋಮಿಯೋಪತಿಕ್ ಡಾಕ್ಟರು ನಾಶವಾಗಲೀ ಎಂದು ಹೇಳುತ್ತೀರಾ ? ರಿನ್ಯೂಯಲ್ ಫೀಜ್ ಜಾಸ್ತಿ ಮಾಡಬೇಕು. ಆಮೇಲೆ "Qualified Medical Practitioners" ಎಂದು ಕೊಟ್ಟಿದ್ದಾರೆ. ಅದರ ಬಗ್ಗೆ ಒಂದು ಅಮೆಂಡ್‌ಮೆಂಟ್ ಕಳುಹಿಸಿದ್ದೇನೆ. ಅದರ ಡೀಟೈಲ್ಸ್ ಅನ್ನು ಅಮೆಂಡ್‌ಮೆಂಟ್ ಬಂದಾಗ ಹೇಳುತ್ತೇನೆ.

ಈ ಬಿಲ್ಲನ್ನು ತಂದಿರುವುದು ನಮ್ಮ ದೇಶದ ಜನಗಳಿಗೆ ಅನುಕೂಲ ಆಗಬೇಕು ಎಂದು. ಹೋಮಿಯೋಪತಿಕ್ ಮೆಡಿಸಿನ್ ಅನ್ನು ಯಾರು ಪ್ರಾಕ್ಟೀಸ್ ಮಾಡುತ್ತಾರೆಯೋ ಅಂಥವರಿಗೆ ಒಂದು ದೊಡ್ಡ ಹೆಸರು ಬರಬೇಕು, ಘನತೆ ಗೌರವ ಬರಬೇಕೆಂದು, ಡಾಕ್ಟರು ಯಾವುದೋ ಒಂದು ಬೋರ್ಡನ್ನು ಹಾಕಿಕೊಂಡು ನಾನು ಹೋಮಿಯೋಪತಿಕ್ ಔಷಧಿಯನ್ನು ಕೊಡುತ್ತೇನೆ ಎಂದರೆ ಆ ಡಾಕ್ಟರ ಹತ್ತಿರ ಹೋಗತಕ್ಕ ಮನುಷ್ಯನಿಗೆ ಆ ಔಷಧಿಯನ್ನು ತೆಗೆದುಕೊಳ್ಳುವುದರಿಂದ ಆತನಿಗೆ ಕ್ಯೂರ್ ಆಗುತ್ತದೆ ಎನ್ನುವ ಭಾವನೆ ಬರಬೇಕು.

"Course of studies and Qualifying Examinations" ಇದರಲ್ಲಿ ಷೆಡ್ಯೂಲ್ (*a*) ನಲ್ಲಿ ಹಾಕಿರುವುದನ್ನು ನೋಡಿದರೆ ಸಾಮಾನ್ಯವಾಗಿ ಹೋಮಿಯೋಪತಿಕ್ ಡಾಕ್ಟರುಗಳು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಹಾಗೆ ಸ್ಟೆತಸ್ಕೋಪ್ ಮತ್ತು ಸಿರಿಂಜ್ ಇಟ್ಟುಕೊಂಡಿರುವವರೆ ಜಾಸ್ತಿ ಇದ್ದಾರೆ. ಅವರಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಆರಿಜನ್ ಹಾಗೆ ಬಂದಿದೆ. ಅದಕ್ಕೆ ಏನಾದರೂ ಒಂದು ಹಿಸ್ಟರಿಯನ್ನು ಕೊಟ್ಟಿದ್ದೀರಾ ? ಯಾವ ರೀತಿ

ಅದನ್ನು ಪ್ರಿಫೇರ್ ಮಾಡುತ್ತಾರೆ. 99 per cent of allopathic doctors are agents of Germany and England. ಈ ಅಲೋಪತಿಕ್ ಮೆಡಿಸಿನ್‌ನಲ್ಲಿ ವಜಿನಾಲಿಟಿ ಇಲ್ಲ. ಬಹಳ ದೊಡ್ಡ L.M.P. or D.S.M. ಮತ್ತು L.M.S. ಎಂದು ಪರೀಕ್ಷೆ ಮಾಡಿರುವವರನ್ನು ನಾನು ಕೇಳಿದ್ದೇನೆ. ಈ ಮೆಡಿಸಿನ್‌ನಲ್ಲಿ ಬಹಳ ಅನ್ಯಾಯ ಇದೆ. ಈ ಹೋಮಿಯೋಪತಿಕ್‌ನಲ್ಲಿ ಯಾವ ಯಾವ ರೋಗಕ್ಕೆ ಯಾವ ಯಾವ ಪಿಲ್ಸ್ ಕೊಡಬೇಕು ಎಂಬುದು ಗೊತ್ತಾಗುವುದಿಲ್ಲ. ನಾನು ಅದನ್ನು ಪ್ರಾಕ್ಟೀಸ್ ಮಾಡುವುದಕ್ಕೆ ಹೋಗಿ ನೋಡಿದ್ದೇನೆ. ಅವು ಒಂದೇ ಬಣ್ಣ ಒಂದೇ ಗಾತ್ರ ಇರುತ್ತದೆ. ಆದರೆ ಯಾವ ರೋಗಕ್ಕೆ ಯಾವ ಮಾತ್ರೆ ಕೊಡಬೇಕು ಎಂಬುದು ಗೊತ್ತಾಗುವುದು ಕಷ್ಟ. ಕೋರ್ಸ್ ಆಫ್ ಸ್ಟಡೀಸ್‌ಗೆ ಕ್ವಾಲಿಫಿಕೇಷನ್ ಮತ್ತು ಎಗ್ಸಾಮಿನೇಷನ್ ಇಲ್ಲ ಎಂದರೆ ಮೆಡಿಕಲ್ ಪ್ರಾಕ್ಟೀಸ್ ಬೇಕಾಗಿಲ್ಲ. ಈ ಆಯುರ್ವೇದ ಓದುವುದಕ್ಕೆ ಎಲ್ಲಿಯಾದರೂ ಕಾಲೇಜ್ ಅಥವಾ ಸ್ಕೂಲನ್ನು ಮಾಡಿದ್ದೀರಾ ಹೇಗೆ? ಯಾವ ಸ್ಕೂಲನಲ್ಲಿ ಇದನ್ನು ಓದಬೇಕು? ಲಾಲ್‌ಬಾಗ್ ಹಾರ್ಟಿಕಲ್ಚರಲ್ ಸ್ಕೂಲನಲ್ಲಿ ಓದಬೇಕೆ, ಹೆಬ್ಬಾಳ್ ಅಗ್ರಿಕಲ್ಚರಲ್ ಸ್ಕೂಲನಲ್ಲಿ ಓದಬೇಕೇ ಅಥವಾ ವೆಟರ್‌ನರಿ ಸ್ಕೂಲನಲ್ಲಿ ಓದಬೇಕೇ ಅಥವಾ ಅದನ್ನು ಕಲಿತುಕೊಂಡು ಬರಬೇಕೇ ಎಂಬುದನ್ನು ಹೇಳಿಲ್ಲ. ಇಂಥಾ ಕಾಲೇಜ್‌ನಲ್ಲಿ ರೆಕಾಗ್ನೈಜ್ ಆಗಿದೆ ಅಥವಾ ಇಲ್ಲ ಎಂಬುದನ್ನು ಮಾಡಿ. ಈಗ ನಮ್ಮ ಇಂಡಿಯಾದಲ್ಲಿ 7 ಕಾಲೇಜುಗಳಿವೆ. ಅವು ಯಾವುವೆಂದರೆ (1) The Calcutta Homeopathetic College and Hospital. Culcutta West Bengal. (2) D. N. Dey Memorial Homeopathetic Medical College and Hospital Culcutta west Bengal. (3) The Prathap and Hearing Homeopathetic Medical College and Hospital, Culcutta. (4) The Midnapur Homeopathic Medical College and Hospital, Midnapur. (5) Bengal Allen Homeopathic Medical College and Hospital, Culcutta. (6) The Andhra Provincial and Homeopathic Medica College and Hospital, Gudivada in Andhra Pradesh. (7) The Madras Homeopathic college and Hospital amalgamated with the A. P. H. College, Gudivada ಇಷ್ಟು ಹೋಮಿಯೋಪತಿಕ್ ಕಾಲೇಜುಗಳಿವೆ. ಈ ಬಿಲ್ಲಿನಲ್ಲಿ ಒಂದು ಷೆಡ್ಯೂಲ್ ಕೊಟ್ಟು ಇಂಥಾ ಕಾಲೇಜಿನಲ್ಲಿ ಅಥವಾ ಸ್ಕೂಲಿನಲ್ಲಿ ಇದನ್ನು ಕಲಿತುಕೊಂಡು ಬರಬೇಕು ಎಂದು ಹೇಳಿಲ್ಲ. Is there no law to regulate the matters ? Can he go and get a certificate even from me ? ಆದ್ದರಿಂದ ಯಾವುದಾದರೂ ಒಂದು ಕಾನೂನು ಮಾಡುವಾಗ ಡಿಫನೆಟ್ಟಾಗಿ ಇಂಥಾವರಲ್ಲಿ ಹೀಗೆ ಮಾಡಬೇಕು ಎಂದು ಹೇಳಬೇಕು.

Mr. SPEAKER.— The House now rises and will meet after half an hour.

The House adjourned for recess at Three of the Clock and reassembled at Thirty-Five Minutes past Three of the Clock.

[Mr. DEPUTY SPEAKER in the Chair]

ಶ್ರೀ ಜಿ. ಎಚ್. ಪುಟ್ಟಣ್ಣ.— ಈ ಹೋಮಿಯೊಪತಿಕ್ ಬಿಲ್‌ನ ಮೇಲೆ ಮಾತನಾಡುತ್ತಾ ಮೂರು ಗಂಟೆಗೆ ನಿಲ್ಲಿಸಿದ್ದಾಯಿತು. ಮುಂದೆ ಹೇಳಬೇಕಾದ ವಿಚಾರ ಬಹಳ ಇವೆ. ಶ್ರೀಮಾನ್ ಪುಟ್ಟಸ್ವಾಮಿಯವರು ನನಗೆ ಹೋಮಿಯೋಪತಿ ಮೇಲೆ ಬಹಳ ಇಷ್ಟವೇನೋ ಎಂದು ಕೇಳುತ್ತಾ ಇದ್ದಾರೆ. ದೇವರು ಮಾಡಿದ ಸೃಷ್ಟಿಯಲ್ಲಿ ಪ್ರತಿಯೊಂದರ ಮೇಲೂ ನನಗೆ ಪ್ರೀತಿ ಇದೆ.

(ಶ್ರೀ ಜಿ. ಎನ್. ಪುಟ್ಟಣ್ಣ)

Recognition of Institutions ಎನ್ನುವುದರಲ್ಲಿ ಆಗಲೇ ಹೇಳಿದ ಹಾಗೆ ಮೈಸೂರು ಸಂಸ್ಥಾನದಲ್ಲಿ ಇನ್‌ಸ್ಟಿಟ್ಯೂಷನ್‌ಗಳೇ ಇಲ್ಲ. ಅವು ಎಲ್ಲಿವೆ ಎಂದು ಕೇಳುತ್ತಾ ಇದ್ದೇನೆ. ಈಗ ಪಾರ್ಟನರ್‌ಷಿಪ್ ಆಕ್ಟ್ ಮತ್ತು ಇನ್ನು ಬೇರೆ ಬೇರೆ ಆಕ್ಟ್ ಪ್ರಕಾರ ರಿಜಿಸ್ಟ್ರೇಷನ್ ಆಗಬೇಕು. ರೆಕಾಗ್ನಿಷನ್ ಆಗಬೇಕಾದರೆ ಏನೇನು ಬೇಕೋ ಅದಕ್ಕೆ ಫಾರಂ ಪ್ರಿಂಟ್ ಮಾಡಿದ್ದಾರೆ. ಈ ತರಹ ಕ್ವಾಲಿಫಿಕೇಷನ್ ಇರಬೇಕು, ಸರ್ಟಿಫಿಕೇಟ್ ಇರಬೇಕು, ದುಡ್ಡು ಕಟ್ಟಿರಬೇಕು ಅಂತ ಇದರಲ್ಲಿ ಹೇಳಿರುತ್ತೀರ. ರಿಜಿಸ್ಟ್ರೇಷನ್ ಆಗುವುದಕ್ಕೆ ಮುಂಚೆ ನಮ್ಮ ದೇಶದಲ್ಲಿ ಆಗಿರಬಹುದಾದ ಇನ್‌ಸ್ಟಿಟ್ಯೂಷನ್‌ನವರಿಗೆ ರೆಕಾಗ್ನಿಷನ್ ಕೊಡುತ್ತೀರಾ ಇಲ್ಲವೇ ಎಂಬುದು ಅರ್ಥವಾಗುವುದಿಲ್ಲ. Recognition of any Institution teaching Homeopathic medicine in India ಎಂದರೆ ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಅರ್ಥವಾಗುವುದಿಲ್ಲ. Any part of India, ಮೈಸೂರು ಅಂತ ಇಲ್ಲ, ಆಂಧ್ರ ಅಂತ ಇಲ್ಲ, "Any Institution applying for recognition to hold qualifying examinations shall send an application to the Registrar and shall give full information in respect of particulars specified in clauses (*b*) to (*c*) of sub-section (1) and such other particulars as the Board may require" ಎಂದು ಇದೆ. Register ಮಾಡುವುದಕ್ಕೆ ಮೊಟ್ಟ ಮೊದಲು Board of examiners ಗೆ ಶಕ್ತಿ ಇದೆಯೇ, ಯಾವ ತರಹ ಫೈನಾನ್ಷಿಯಲ್ strength ಇದೆ ಎಂದು ಇಲ್ಲಿ ಎಲ್ಲೂ ಹೇಳಿಲ್ಲ. ಇದನ್ನು ತಾವು ಗುರುತು ಹಾಕಿಕೊಳ್ಳಬೇಕು, 1958 ನೇ ಇಸವಿಯಲ್ಲಿ ಈ ಬಿಲ್ ಇಂಟ್ರೊಡ್ಯೂಸ್ ಮಾಡಿದಿರಿ. ಅದು ಲ್ಯಾಪ್ಸ್ ಆಯಿತು, 1960 ರಲ್ಲಿ ತಂದಿರಿ. ಇವತ್ತಿನವರೆಗೂ ಇಂಡಿಯಾ ದೇಶದಲ್ಲಿ ಅಥವ ಮೈಸೂರು ದೇಶದಲ್ಲಿ ಎಷ್ಟು ಜನ ಹೋಮಿಯೋಪಥಿಕ್ ಪ್ರಾಕ್ಟೀಷನರ್ಸ್ ಇದ್ದಾರೆ. ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ಪರಿಶೀಲನೆ ಮಾಡಿಲ್ಲ. ಫೈನಾನ್ಷಿಯಲ್ ಮೆಮೊರ್ಯಾಂಡಂ ಈ ಬಿಲ್‌ನಲ್ಲಿ ಇಲ್ಲ, ಯಾರೋ ಮಾಡಿದ್ದಾರೆ ಅವನ್ನೇ ಮಕ್ಕಿ ಕಾ ಮಕ್ಕಿ ಇಲ್ಲೂ ಮಾಡ್ತೀರಿ ಎಂದು ಹೇಳುತ್ತೇನೆ.

Sri K. K. HEGDE.—We presume that it can function without any financial assistance.

Sri G. N. PUTTANNA.—How ? Then this is no Bill at all. It is impossible to function without money. Financial memorandum ಕೊಡಬೇಕಾಗಿತ್ತು. ಡಾಕ್ಟರ್ ಕೆ. ಕೆ. ಹೆಗಡೆ ಅವರು ಹೇಳುವ ಮಾತಿನಲ್ಲಿ ನಂಬಿಕೆಯಿದೆ. ಆದರೆ ಸರಕಾರದ ಮಾತಿನಲ್ಲಿ ನಂಬಿಕೆಯಿಲ್ಲ. ನಾನು ಕೇಳುತ್ತೇನೆ ಇದಕ್ಕೆ ಎಲ್ಲಿಂದ ದುಡ್ಡು ತರುತ್ತೀರಿ ? ಸಂಬಳ ಅವನ ಬಾಡಿಗೆ ಮುಂತಾದ್ದು ಕೊಡುವುದಕ್ಕೆ ಎಲ್ಲಿಂದ ದುಡ್ಡು ಬರುತ್ತದೆ ? ಇನ್‌ಸ್ಟಿಟ್ಯೂಷನ್ಸ್ ರಿಜಿಸ್ಟರ್ ಮಾಡಿದ ಮೇಲೆ ದುಡ್ಡು ಇಲ್ಲದೇ ಇದ್ದರೆ ಏನು ಮಾಡುತ್ತೀರಿ ? ಎರಡು ರೂಪಾಯಿ ಒಂದು ರಿಜಿಸ್ಟ್ರೇಷನ್ನಿಗೆ ಆದರೆ 500 ರಿಜಿಸ್ಟ್ರೇಷನ್ನಿನಿಂದ ಒಂದು ಸಾವಿರ ರೂಪಾಯಿ ಬರಬಹುದು. ಇಷ್ಟು ಸಾಕಾಗುತ್ತದೆಯೇ ? Recognition ಅನ್ನು Whole of India ಕ್ಕೆ ಕೊಡುತ್ತೀರಾ ? ಇದನ್ನು ದಯವಿಟ್ಟು ತಿಳಿಸಬೇಕು. ಇನ್ನು rules making authority ನೀವು ಇಟ್ಟುಕೊಂಡಿದ್ದೀರಿ. Schedule I ರಲ್ಲಿ LCEH ಇದೊಂದು ಡಿಗ್ರೀ ಆಗಿದೆಯೇ ಅಥವಾ course of studies ಆಗಿದೆಯೇ ? ಒಂದನೇ ವರ್ಷದ ಕೋರ್ಸಿನಿಂದ ನಾಲ್ಕನೇ ವರ್ಷದ ವರೆಗೆ elementary physics chemistry biology subjects ಇವೆ. ಅಲೋಪಥಿಗೆ ಸಂಬಂಧಪಟ್ಟ ವಿಷಯ prescribe ಮಾಡಿದ್ದೀರಿ. ಆದರೆ ಹೋಮಿಯೋಪಥಿಗೆ ಸಂಬಂಧಪಟ್ಟ ವಿಷಯ prescribe ಮಾಡಿಲ್ಲ. ಆದುದರಿಂದ ಹೋಮಿಯೋಪಥಿಗೆ ಸಂಬಂಧಪಟ್ಟ

ವಿಷಯ prescribe ಮಾಡಬೇಕು. ಕಂಟೋನ್ಮೆಂಟಿನಲ್ಲಿ ಒಂದು ಇನ್‌ಸ್ಟಿಟ್ಯೂಷನ್ ಇದೆ ಅದು recognise ಆಗಿದೆಯೋ ಯಾವುದೂ ಗೊತ್ತಾಗುವುದಿಲ್ಲ. ಈ ಕೋರ್ಸಿಗೇ ಕಾಕ್ಯುಲಂ ಗೊತ್ತು ಮಾಡಬೇಕು. ಈ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ದಯವಿಟ್ಟು ಮಸೂದೆಯಲ್ಲಿ ಸೇರಿಸಬೇಕು. ಇಷ್ಟೇ ಅಲ್ಲದೆ elementary physics subjects ಬಗ್ಗೆ details ಕೊಡಬೇಕು. If the candle is burnt nothing is lost ಎಂದು ಹೇಳುವ physics ಬೇಕಾಗಿಲ್ಲ. GCEH ಅಂದರೆ ಅದು ಒಂದು ಡಿಗ್ರಿ ಎಂದು ಕಾಣುತ್ತದೆ. ಹೋಮಿಯೋಪತಿಗೆ ಸಂಬಂಧಪಟ್ಟ ಔಷಧಿಗಳ ವಿಷಯ ಇದರಲ್ಲಿ ಇರಬೇಕು.

ಇನ್ನು court of Examiners ಬಗ್ಗೆ chapter III ಯಲ್ಲಿ ಹೇಳುವಾಗ್ಗೆ the Director of Medical services in Mysore who shall be the Chairman of the Court ಎಂದು ಹೇಳಿದೆ. ಹೋಮಿಯೋಪತಿ ಮೆಡಿಸನ್ ಏನು ಎಂಬುದು ಇವರಿಗೆ ಗೊತ್ತಿರುವದಿಲ್ಲ. ಅಂಥವರನ್ನು ಚೇರ್ಮನ್ ಮಾಡಿದರೆ ಪ್ರಯೋಜನವಿಲ್ಲ. ಅವರಿಗೆ ಇದರಲ್ಲಿ ನಂಬಿಕೆಯು ಇರುವುದಿಲ್ಲ. ಆದ್ದರಿಂದ ಹೋಮಿಯೋಪತಿ ಬಗ್ಗೆ ಅವರಿಗೆ ತಿರಸ್ಕಾರ ಬರುತ್ತದೆ. ಇಂಥವರನ್ನು ನೇಮಕ ಮಾಡಬಾರದು. ಇದು ಸರಿಯಾಗಿರುವುದಿಲ್ಲ. ಹತ್ತಿಪ್ಪತ್ತು ವರುಷ ಯಾರು ಹೋಮಿಯೋಪತಿ ಪ್ರಾಕ್ಟಿಸ್ ಮಾಡಿರುತ್ತಾರೆಯೋ, ಯಾರಿಗೆ ನಂಬಿಕೆ ಇದೆಯೋ, ಅಂಥವರನ್ನು ಈ ಸ್ಥಾನಕ್ಕೆ ನೇಮಕ ಮಾಡಬೇಕು. ಇನ್ನು ಈ ಮೆಡಿಸನ್ ಹೇಗೆ ಬಂತು ಅದರ ವಿಚಾರ ಹೇಳುತ್ತೇನೆ. ಆಯುರ್ವೇದದಲ್ಲಿ ಧನ್ವಂತರಿಯು ಸತ್ತವರನ್ನು ಬದುಕಿಸುತ್ತಿದ್ದ ವಿಚಾರ ಹೇಳಿದ್ದಾರೆ. ಅಂಥ ಆಯುರ್ವೇದವು ಮುಸಲ್ಮಾನರ ದರಬಾರು ಬಂದ ಮೇಲೆ ಹೊರಟು ಹೋಯಿತು ಮತ್ತು ಯುನಾನಿ ಪದ್ಧತಿ ಜಾಸ್ತಿಯಾಯಿತು. ಅನಂತರ ಬ್ರಿಟಿಷರ ರಾಜ್ಯ ಪ್ರಾರಂಭವಾದ ಮೇಲೆ ಆಯುರ್ವೇದವು ಹೋಯಿತು, ಯುನಾನಿ ಪದ್ಧತಿಯು ಹೋಯಿತು ಅಲೋಪತಿ ಜಾಸ್ತಿಯಾಯಿತು ಇಂಗ್ಲೇಂಡಿಗೆ ಹೋಗಿ ಕಲಿತು ಬಂದ ಡಾಕ್ಟರರಿಗೆ ಸಾವಿರ ರೂಪಾಯಿ ಸಂಬಳ ಕೊಡುವುದಕ್ಕೆ ಪ್ರಾರಂಭವಾಯಿತು. ಬ್ರಿಟಿಷರು ನಮಗೆ ಗುಮಾಸ್ತ ಆಗುವ ವಿದ್ಯೆ ಮಾತ್ರ ಕಲಿಸಿದರು. ಆದರಿಂದ ನಮ್ಮ ದೇಶದಲ್ಲಿಯು ವಿದ್ಯೆ ಹಾಳಾಯಿತು. ಆದರೆ ಸ್ವಾತಂತ್ರ್ಯ ದೊರೆತ ಮೇಲೆ ಇತ್ತೀಚೆಗೆ ನಮ್ಮ ಜನ ಕಣ್ಣು ತರೆದು ನೋಡುತ್ತಿದ್ದಾರೆ. ಈ ಹೋಮಿಯೋಪತಿ ಸಿಸ್ಟಮ್ ಮೊದಲು ಜರ್ಮನಿಯಲ್ಲಿ ಪ್ರಖ್ಯಾತಿ ಪಡೆಯಿತು. ನಂಬಿಕೆ ಇದ್ದವರು ಮಾತ್ರ ಈ ಸಿಸ್ಟಮ್ ಅನುಸರಿಸುವದಕ್ಕೆ ಅವಕಾಶ ಮಾಡಿಕೊಡಲಾಯಿತು. ಜರ್ಮನಿಯಲ್ಲಿ ಕುಡಿಯುವುದು ಸಿಗರೇಟು ಸೇದುವುದು ಕಡಿಮೆಯಾಗಿ ಎಲ್ಲರೂ ಧೃಢಕಾಯರಾಗಿದ್ದಾರೆ. ಎಲ್ಲಾ ಕಡೆಗೆ Milk Bars ಜಾಸ್ತಿಯಾಗಿವೆ. ಆಯುರ್ವೇದದಲ್ಲಿಯು ಸಹ ಪಥ್ಯ ಮಾಡಬೇಕಾಗುತ್ತದೆ. ದೇಹವನ್ನು ದಂಡಿಸಿ ಪಥ್ಯ ಮಾಡುವುದರಿಂದ ಶರೀರದಲ್ಲಿ ರೋಗ ನಿವಾರಣೆ ಶಕ್ತಿ ಬರುತ್ತದೆ. ಇದು ಒಳ್ಳೆಯ ಮಾರ್ಗವಾಗಿದೆ. ಆದರೆ ಅಲೋಪತಿಯಲ್ಲಿ ಒಂದು ಕಡೆ ದನ ಹುಲ್ಲು ತಿಂದ ಹಾಗೆ ತಿನ್ನುತ್ತಾ ಇರಬೇಕು ಇನ್ನೊಂದು ಕಡೆ ಔಷಧಿ ಕುಡಿಯುವುದು ಇಂಜೆಕ್ಷನ್ ಚುಚ್ಚಿಸಿಕೊಳ್ಳುವುದು ನಡೆಯುತ್ತಲೇ ಇರುತ್ತದೆ. ಇಂಥ ಅಲೋಪತಿ ಸಿಸ್ಟಂ ಔಷಧ ಕೊಡುವ ಡಾಕ್ಟರರಿಗೆ ಒಂದು ತಿಂಗಳಿಗೆ 250 ರೂಪಾಯಿ ಸಂಬಳ ಕೊಡುತ್ತೀರಿ. ಆದರೆ ಹೋಮಿಯೋಪತಿ ಸಿಸ್ಟಂ ಡಾಕ್ಟರರಿಗೆ 25 ರೂಪಾಯಿ ಕೊಡುವುದಿಲ್ಲ. ಈ ರೀತಿಯ system of medicine ಜರ್ಮನಿಯಲ್ಲಿ ಬಳಕೆಗೆ ಬಂತು. ಅವರಿಗೆ ಹೋಮಿಯೋಪತಿ ಪದ್ಧತಿಯಲ್ಲಿ ನಂಬಿಕೆ ಜಾಸ್ತಿ. ಇದೇ ಜರ್ಮನಿಯಲ್ಲಿ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಹೋಮಿಯೋಪತಿ ಪ್ರಾಕ್ಟಿಷನರ್ಸ್ ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಮೈಸೂರು ದೇಶದಲ್ಲಿ ರಿಜಿಸ್ಟರ್ ಮಾಡುತ್ತಿಲ್ಲ. ಯಾರೋ ಪುಸ್ತಕ ತರಿಸಿ ಓದಿಕೊಂಡು ಓದಿ ತಾವು ಡಾಕ್ಟರೆಂದು ಹೇಳಿಕೊಳ್ಳುತ್ತಾರೆ. ನಾನೂ ಪುಸ್ತಕವನ್ನು ತರಿಸಿ ಓದಿದ್ದೇನೆ. ಔಷಧಿ ಮಾತ್ರೆಗಳನ್ನು ಕಳಿಸಿಕೊಡುತ್ತಾರೆ. ಅವೆಲ್ಲ ಒಂದೇ ತರಹ ಮಾತ್ರೆಗಳಾಗಿ ಕಾಣುತ್ತವೆ. ಯಾವ ರೋಗಕ್ಕೆ ಯಾವ ಮಾತ್ರೆಗಳನ್ನು ಕೊಡಬೇಕು ಎಂದು ಅವರು ಹೇಳುವುದಿಲ್ಲ. ಇಂಥ

(ಶ್ರೀ ಡಿ. ಎಚ್. ಪುಟ್ಟಣ್ಣ)

ರೋಗಿಗಳಿಗೆ ಇಂಥ ಮಾತ್ರೆ ಕೊಡಬೇಕು ಎಂಬುದನ್ನು ಓದಿಕೊಂಡು ತಿಳಿಯಬೇಕು. ಇಲ್ಲದೆ ಹೋದರೆ ರೋಗಿ ಮುಳುಗಿ ಹೋಗುತ್ತಾನೆ. ಹೋಮಿಯೋಪತಿ ಮಾತ್ರೆ, ವೈಕುಂಠ ಯಾತ್ರೆ ಆಗುತ್ತದೆ. ಆದ್ದರಿಂದ ನಾಲ್ಕು ವರ್ಷ ಅಭ್ಯಸಿಸಿದ ಮೇಲೆ homeopathy system of medicine ಏನು ಯಾವ ಯಾವ combinations ಕೊಡಬೇಕೆಂಬುದನ್ನು ತಿಳಿದುಕೊಳ್ಳಬೇಕು. ಅಂಥವರಿಗೆ ಡಿಗ್ರಿ ಕೊಡುತ್ತಾರೆ. ಇಲ್ಲದೆ ಹೋದರೆ ಇಂಗ್ಲೆಂಡಿನಲ್ಲಿ 21 ಷಿಲಿಂಗ್ ಕೊಟ್ಟರೆ ದೊರೆಯುವ F.R.H.S. (Lond) ಡಿಗ್ರಿಯಂತೆ ಆಗುತ್ತದೆ. fellow of the Royal Horticultural society ಡಿಗ್ರಿ ಪಡೆಯಲು ಯಾವ ಗಿಡ ಯಾವರೀತಿ ಬೆಳೆಯುತ್ತದೆ grafting ಎಂದರೆ ಏನು ಎನ್ನುವುದೇ ಗೊತ್ತಿರುವುದಿಲ್ಲ. ಈ ತರಹ ಹೋಮಿಯೋಪತಿ ಪದ್ಧತಿಯಲ್ಲಿ ತಗಾದೇದಿ. ಷೆಡ್ಯೂಲ್‌ನಲ್ಲಿ ಕೊಟ್ಟಿರುವ ಮೊದಲ ಎರಡು ಪರೀಕ್ಷೆಗಳೂ ಸರಿಯಾಗಿವೆ ಮೂರನೆಯದಾದ C ಪಾರ್ಟಿನಿಂದ ಅನಾಹುತಗಳಾಗಬಹುದು. ಆದುದರಿಂದ ಇದರ ವಿಚಾರದಲ್ಲಿ ಆಲೋಚನೆ ಮಾಡಿ M. B. B. S. ಆದವರಿಗೆ ಯಾವ ಸ್ಥಾನ ಮಾನಗಳನ್ನು ಕೊಟ್ಟಿದ್ದಾರೋ, D. S M. ಆದವರಿಗೆ ಏನು ಸ್ಥಾನಮಾನಗಳನ್ನು ಕೊಡುತ್ತೀರೋ ಅದೇರೀತಿ ನಾಲ್ಕು ವರ್ಷ ಓದಿ ಪಾಸ್ ಮಾಡಿರುವ ಹೋಮಿಯೋಪತಿ ವೈದ್ಯರಿಗೂ ಕೊಡಿ. ಇದರಿಂದ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ. ಇದು ಬಹಳ ಕಡಿಮೆ ದರದಲ್ಲಿ ದೊರೆಯುವ ಔಷಧಿ. ಬಡ ಬಗ್ಗರಿಗೂ ಸುಲಭವಾಗಿ ದೊರೆಯುವಂಥದ್ದು. ದೊಡ್ಡ ನಗರಗಳಲ್ಲಿರುವ ಡಾಕ್ಟರುಗಳು ಬೆಳಗ್ಗೆ ಆಸ್ಪತ್ರೆಗಳಲ್ಲಿ ಕೆಲಸ ಮಾಡಿ ಸಾಯಂಕಾಲ ಖಾಸಗಿ ಕ್ಲಿನಿಕ್‌ಗಳಲ್ಲಿ ಕೆಲಸಮಾಡಿ ಸಂಪಾದನೆ ಮಾಡುತ್ತಾರೆ. ಆಸ್ಪತ್ರೆಗಳಿಗೆ ಹೋಗಿ ನೋಡಿದರೆ ಇಂಥಿಂಥಾ ಕ್ಲಿನಿಕ್‌ಗೆ ಬನ್ನಿ ಎಂದು ಹೇಳುತ್ತಾರೆ. ಹೋಮಿಯೋಪತಿಯಲ್ಲಿ ಹಾಗಿಲ್ಲ. ಎಂಟಾಣೆ ಕೊಟ್ಟರೂ ಔಷಧಿ ಕೊಡುತ್ತಾರೆ, ಪುನಃ ಸಟ್ಟೆ ಕೊಟ್ಟರೂ ಹೆಚ್ಚು ನಷ್ಟವಾಗುವುದಿಲ್ಲ. ಇವೆಲ್ಲ Subsidised medicines, working cost ಬಹಳ ಕಡಿಮೆ. ಅಲೋಪತಿಕ್ ಔಷಧಿಗಳ ಬೆಲೆ ಬಹಳ ಜಾಸ್ತಿ. ಯಾವುದಾದರೂ ಔಷಧಿ ಕೊಂಡುಕೊಳ್ಳಲು ಹೋದರೆ ಬೆಲೆ ಜಾಸ್ತಿ ಇರುತ್ತದೆ, ಕಾರಣ ಕೇಳಿದರೆ ಮೊರಾರ್ಜಿ ದೇಸಾಯಿಯವರು 25% ತೆರಿಗೆ ಹಾಕಿದ್ದಾರೆಂದು ಹೇಳುತ್ತಾರೆ. ಅಲೋಪತಿ ಔಷಧಿ ತೆಗೆದುಕೊಳ್ಳಬೇಕಾದರೆ ಐಶ್ವರ್ಯವಂತರಾಗಿರಬೇಕು. ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಪದ್ಧತಿಯಲ್ಲಿ ವೈದ್ಯರಿಗೆ ಭೂತದಯ, ಪಶ್ಚಾತ್ತಾಪವಿದೆ.

> "The Director of Medical services in Mysore shall be the Chairman of the Court;" ಎಂದಿದೆ. He should not be. The chairman must be a person who has practised the Homeopathic system of medicine and who has got love for homeopathic system in his mind ಸರ್ಕಾರದಿಂದ ನಾಮಿನೇಷನ್ ಇರಬಾರದು. ಅದನ್ನು ತೆಗೆಯಬೇಕು. ನಾನು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಅವರನ್ನು critisise ಮಾಡುತ್ತಿಲ್ಲ. ಅವರಿಗೆ ಅಲೋಪತಿಯಲ್ಲಿ ತಲೆ ಓಡುತ್ತದೆಯೋ ಹೊರತು ಹೋಮಿಯೋಪತಿಯ ಕಡೆ ಓಡುವುದಿಲ್ಲ.

Sri T. PARTHASARATHY.—The man who invented the Homeopathic System of medicine was himself an allopathic doctor. That shows the broad mindedness of allopathic doctors.

ಶ್ರೀ ಡಿ. ಎಚ್. ಪುಟ್ಟಣ್ಣ.—ಶ್ರೀಮಾನ್ ಪಾರ್ಥಸಾರಥಿಯವರು ನನ್ನ ರಕ್ಷಣೆಗೆ ಬಂದಿದ್ದಾರೆ. ಅಲೋಪಥಿಕ್ ಪದ್ಧತಿಯನ್ನು ತಿಳಿದುಕೊಂಡು ಅದರಿಂದ ಜನಗಳಿಗೆ ತೊಂದರೆಯಾಗುತ್ತದೆ, ಬಡಬಗ್ಗರಿಗೆ ಅನುಕೂಲವಾಗುವುದಿಲ್ಲವೆಂದು ತಿಳಿದು ಹೋಮಿಯೋಪತಿ ಔಷಧಿಗಳನ್ನು ಕಂಡುಹಿಡಿದರು. ಇದರಿಂದ ಜನರಿಗೆ ಸುಲಭ ದರದಲ್ಲಿ ಔಷಧಿ ಸಿಕ್ಕಲು ಸಹಾಯವಾಗಿದೆ.

ಹೋಮಿಯೋಪತಿ ಪದ್ಧತಿಯಲ್ಲಿ ಅನುಭವ ಮತ್ತು ನಂಬಿಕೆಯುಳ್ಳವರನ್ನು ಚೇರ್‌ಮನ್ ಆಗಿ ಮಾಡಬೇಕೇ ಹೊರತು ಅಲೋಪತಿ ಪದ್ಧತಿಯಲ್ಲಿ ಪ್ರಾಕ್ಟೀಸ್ ಮಾಡುತ್ತಿರುವವರನ್ನು ಚೇರ್‌ಮನ್ ಆಗಿ ನೇಮಿಸಿ ಅವರು ಅಲೋಪತಿ ಪ್ರಾಕ್ಟೀಸ್ ಮಾಡುತ್ತಾ ಹೋಮಿಯೋಪತಿ preach ಮಾಡುವುದಾದರೆ ಅದರಿಂದ ಏನು ಸಾಧನೆಯಾಗುವುದಿಲ್ಲ. The president must have implicit faith in the encouragement of homeopathy. Why should the Director of Medical Services be the Chairman of the Court? ಸೆಕ್ಷನ್ 16ರಲ್ಲಿ. Court of Examiners ಎಂಬುದರ ಕೆಳಗೆ : it shall consist of three persons possessing any of the qualifications specified in the Schedule nominated by the State Governm·nt ಎಂದು ಹೇಳುತ್ತೀರ. ನಾಮಿನೇಟ್ ಮಾಡಬೇಕೆಂದು ಎಲ್ಲಿ ಹೇಳಿದೆ? ನೀವು ನಾಮಿನೇಟ್ ಮಾಡುವುದರಲ್ಲಿ ಹೋಮಿಯೋಪತಿಗೆ ತಿಲಾಂಜಲಿ ಬಿಟ್ಟು ಬಿಡುತ್ತೀರ. ನಿಮ್ಮ ಮನಸ್ಸೆಲ್ಲಾ ಅಲೋಪತಿಗೇ ಹೋಗುತ್ತಾ ಇದೆ.

4-00 P.M.

ಶ್ರೀ ಕೆ. ಕೆ. ಹೆಗ್ಡೆ.—ಹೋಮಿಯೋಪತಿ ಡಾಕ್ಟರನ್ನೇ ಮಿನಿಸ್ಟರಾಗಿ ಮಾಡಿ ಬಿಡಿ.

ಶ್ರೀ ಜಿ. ಎಚ್. ಪುಟ್ಟಣ್ಣ.—ಅವರೂ ಆಗಬಹುದು. ರೂಸ್‌ವೆಲ್ಟರು ಯುನೈಟೆಡ್ ಸ್ಟೇಟ್ಸ್ ಪ್ರೆಸಿಡೆಂಟರಾಗಿದ್ದಾಗ ಇಂಡಿಯಾ ಗವರ್ನ್‌ಮೆಂಟಿನ ಮಿನಿಸ್ಟರೊಬ್ಬರು ಅವರನ್ನು ನೋಡಲು ಹೋಗಿದ್ದರು. ವಿಸಿಟಿಂಗ್ ಕಾರ್ಡ್ ಕೊಟ್ಟಿದ್ದರು. ಟೈಮಿಗೆ ಸರಿಯಾಗಿ ಮಿನಿಸ್ಟರು ಹೋದಾಗ, ಪ್ರೆಸಿಡೆಂಟರು ಅವರನ್ನು ಎದುರುಗೊಳ್ಳಲು ಬಾಗಿಲಿಗೆ ಬಂದರು. ಆಗ ಪ್ರೆಸಿಡೆಂಟರ ಆಫೀಸ್ ಬಾಗಿಲಿನ ವಾಚ್‌ಮನ್ ಸಿಗರೇಟ್ ಹೊಡೆಯುತ್ತಿದ್ದ. ನಮ್ಮ ಮಿನಿಸ್ಟರು ಕೆಲಸ ತೀರಿಸಿಕೊಂಡು ಹೊರಗೆ ಬಂದಾಗ ಏನಪ್ಪ ಪ್ರೆಸಿಡೆಂಟರು ಬಂದಾಗ ಸಿಗರೇಟು ಸೇದಬಹುದೇ ಎಂದು ಕೇಳಿದಕ್ಕೆ. "What is there, I can become the President one day" ಎಂದ. ಅದೇ ರೀತಿ ಹೋಮಿಯೋಪತಿ ಡಾಕ್ಟರೂ ಒಂದು ದಿವಸ ಇಲ್ಲಿ ಮಿನಿಸ್ಟರಾಗಬಹುದು. ಎಂಥೆಂಥವರೋ ಮಿನಿಸ್ಟರಾಗುತ್ತಾ ಇದ್ದಾರೆ, ಅವರು ಏಕೆ ಆಗುವುದಿಲ್ಲ. ಮಿನಿಸ್ಟರೇಕೆ, ಯಾರು ಬೇಕಾದರೂ ಪ್ರೆಸಿಡೆಂಟ್ ಆಫ್ ಇಂಡಿಯಾ ಆಗಬಹುದು.

ಹೋಮಿಯೋಪತಿ ಡಾಕ್ಟರು ಕೋರ್ಟ್ ಆಫ್ ಎಕ್ಸಾಮಿನರ್ಸ್‌ನಲ್ಲಿರಬೇಕು ಇಲ್ಲದಿದ್ದರೆ, ಹೋಮಿಯೋಪತಿ ಸಿಸ್ಟಮ್ ಆಫ್ ಮೆಡಿಸನ್ನಿಗೆ ಎಷ್ಟು ಬೆಲೆ ಬರಬೇಕೋ ಅಷ್ಟು ಬರುವುದಿಲ್ಲ; ಅಷ್ಟು ಬೆಲೆ ಸಿಗುವುದಿಲ್ಲ. ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್ ಈ ಬೋರ್ಡಿನಲ್ಲಿರಕೂಡದು. ಮೆಂಬರುಗಳಿಗೆ ಇಂಥಿಂಥ ಕ್ವಾಲಿಫಿಕೇಶನ್ ಇರಬೇಕೆಂದು ಒಂದು ಪ್ರಾವಿಷನ್ ಮಾಡಿ, ಶೆಡ್ಯೂಲ್ ಸೇರಿಸಿ ಮತ್ತೂ ಸರ್ಕಾರಕ್ಕೆ ದುಡ್ಡು ಇದ್ದರೆ, ಶಕ್ತಿ ಇದ್ದರೆ, ಮನಸ್ಸು ಇದ್ದರೆ, ಹೋಮಿಯೋಪತಿ ಇಂಟ್ರೋಡ್ಯೂಸ್ ಮಾಡಿ. ಹೋಮಿಯೋಪತಿ ಇಂಟ್ರೊಡ್ಯೂಸ್ ಮಾಡಿದರೆ ಪ್ರೊಹಿಬಿಷನ್ ಬೇಕಾಗಿಯೇ ಇಲ್ಲ. ಏಕೆಂದರೆ ಪ್ರೊಹಿಬಿಷನ್ ಸಿಸ್ಟಮ್ ಆಫ್ ಮೆಡಿಸನ್ ತಗೆದುಕೊಂಡರೆ, ಸಿಗರೇಟ್ ಸೇದುವುದಕ್ಕಾಗುವುದಿಲ್ಲ, ಬೀಡಿ ಸೇದುವುದಕಾಗುವುದಿಲ್ಲ. ಆಲ್ಕೋಹಾಲಿಕ್ ಲಿಕರ್ ತೆಗೆದುಕೊಂಡರೆ, ಹೋಮಿಯೋಪತಿ ಮೆಡಿಸನ್ ನಾಟುವುದಿಲ್ಲ. ಆದ್ದರಿಂದ ಅಲ್ಕೋಹಾಲ್ ತೆಗೆದುಕೊಳ್ಳುವುದನ್ನೇ ಬಿಟ್ಟುಬಿಡುತ್ತಾರೆ. ಪ್ರೊಹಿಬಿಷನ್ ಬದಲು, ಹೋಮಿಯೋಪತಿ ಮೆಡಿಸನ್ನನ್ನು ಕಂಪಲ್ಸರಿಯಾಗಿ ಇಂಟ್ರೊಡ್ಯೂಸ್ ಮಾಡಿ. ಜರ್ಮನಿಯೊಳಗೆ ಎಷ್ಟು ಜನ ಹೋಮಿಯೋಪತಿಕ್ ಸಿಸ್ಟಮ್ ಆಫ್ ಮೆಡಿಸನ್ ತೆಗೆದುಕೊಳ್ಳುತ್ತಾರೆ. ಎಷ್ಟು ಜನ ಅಲೋಪತಿಕ್ ಮೆಡಿಸನ್ ತೆಗೆದುಕೊಳ್ಳುತ್ತಾರೆನ್ನುವುದಕ್ಕೆ ಸ್ಟಾಟಿಸ್ಟಿಕ್ಸ್ ಇದೆ, ನೋಡಿ. ನೀವು 14 ವರ್ಷಗಳಿಂದ ದರ್ಬಾರ್ ಮಾಡುತ್ತಿದ್ದೀರ. ಹೋಮಿಯೋಪತಿ ಡಾಕ್ಟರ್ ಎಷ್ಟು ಜನರಿದ್ದಾರೆ, ಆ ಮೆಡಿಸನ್ ಎಷ್ಟು ಜನ ತೆಗೆದುಕೊಳ್ಳುತ್ತಿದ್ದಾರೆ, ಎಷ್ಟು ಹೋಮಿಯೋಪತಿ ಆಸ್ಪತ್ರೆಗಳಿವೆ. ಅದರಲ್ಲಿ ಅಟೆಂಡೆನ್ಸ್ ಎಷ್ಟಿದ್ದಾರೆ, ಎಂಬುದರ ಬಗ್ಗೆ ಏನಾದರೂ ಸ್ಟ್ಯಾಟಿಸ್ಟಿಕ್ಸ್ ಸಂಗ್ರಹಿಸಿದ್ದೀರ?

Mr. DEPUTY SPEAKER.—The time allotted for this Bill is till 4–30 P.M.

Sri J. B. MALLARADHYA.—There are as many as 27 amendments. There are eight more members to speak. I request that the time may be extended till the end of this day.

Sri KADIDAL MANJAPPA.—That is too much. There was an understanding that after this Bill is finished I should make a statement with regard to the Land Reforms Bill.

Therefore this Bill should be finished by 4–30.

Sri J. B. MALLARADHYA.—That would not be practical. I suggest we continue this Bill till 5-30.

Sri KADIDAL MANJAPPA.—That would not leave enough time for me to take a statement. I suggest that the Bill be finished by 5–15 P.M. leaving half an hour for me.

Mr. DEPUTY SPEAKER.—The question is:

"That discussion on this Bill be continued till 5–15 P.M."

The motion was adopted.

Mr. DEPUTY SPEAKER.—The general discussion of this Bill should close at 4–30 P.M. We will then take up amendments.

ಶ್ರೀ ಜಿ. ಎಚ್. ಪುಟ್ಟಣ್ಣ.—ಈ ಹೋಮಿಯೋಪತಿಕ್ ಬಿಲ್ಲನ್ನು ನಮ್ಮ ಮಂತ್ರಿಗಳು ಬಹಳ ಸಂಕುಚಿತ ಭಾವನೆಯಿಂದ ತಂದಿದ್ದಾರೆ. 1958ರಲ್ಲೇ ಈ ಬಿಲ್ಲು ಬರುತ್ತದೆ ಎಂದಿತ್ತು. 1960ಕ್ಕೆ ಬರುತ್ತೆ ಎಂದಿತ್ತು, ಆದರೆ ಈಗ ಈ ಬಿಲ್ಲು ಬರುತ್ತಿದೆ. ಇದು ಬಹಳ ಒಳ್ಳೆಯ ಬಿಲ್ಲು ಆಗಿರುವುದರಿಂದ ಇದರ ಮೇಲೆ ಮಾತನಾಡಲು ಸ್ವಲ್ಪ ಅವಕಾಶ ಕೊಡಬೇಕೆಂದು ಕೇಳಿದರೂ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಇದಕ್ಕೆ ಅವಕಾಶ ಕೊಡಲು ಆಗುವುದಿಲ್ಲ ಎಂದು ಹೇಳಿದರು. ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಹೆಗ್ಡೆಯವರು ಒಂದು ಒಳ್ಳೆಯ ಭಾವನೆಯಿಂದ ಇಂತಹ ಒಂದು ಬಿಲ್ಲನ್ನು ತಂದು ಇಲ್ಲೇ ಮಂಡಿಸಿದ್ದಾರೆ. ಇದರ ಪರಿಣಾಮ ಹೇಗಾಗುತ್ತದೆ ಎನ್ನುವುದನ್ನೆಲ್ಲಾ ಇನ್ನೂ ಚೆನ್ನಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಈ ಬಿಲ್ಲಿನ ಮೇಲೆ ಇನ್ನೂ ಎಷ್ಟೋ ಜನ ಮಿತ್ರರುಗಳು ಮಾತನಾಡಬೇಕೆಂದು ಇದ್ದರೂ ಅವಕಾಶವಿಲ್ಲ ಎಂದು ಹೇಳುವುದನ್ನು ನೋಡಿದರೆ ಅದು ನಮ್ಮ ದುರಾದೃಷ್ಟ ಎಂದು ಹೇಳಬೇಕಾಗಿದೆ. ಇಷ್ಟನ್ನು ಹೇಳುತ್ತಾ ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಹೆಗ್ಗಡೆಯವರನ್ನು ಕೇಳಿಕೊಳ್ಳುವುದು, ಈ ಬಿಲ್ಲಿನ ಮೇಲೆ ತಂದಿರುವ ಅಮೆಂಡುಮೆಂಟುಗಳನ್ನು ಪರಿಶೀಲನೆ ಮಾಡಿ ಒಪ್ಪಿಕೊಳ್ಳಲು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಸ್ವಲ್ಪ ಚೆನ್ನಾಗಿ ಪರಿಶೋಧನೆ ಮಾಡಲು ಅವಕಾಶವನ್ನು ಕೊಡಬೇಕು. ಇಲ್ಲದೆ ಇದ್ದರೆ ಇದರಿಂದ ದೇಶದ ಜನಗಳಿಗೆ ತೊಂದರೆಯಾಗುತ್ತದೆ. ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೈ ಜಗತ್.

†ಡಾ. ಟಿ. ಪಾರ್ಥಸಾರಥಿ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಣ್ಣನವರು ನಮ್ಮ ವೈದ್ಯದ ಅಭ್ಯಾಸದ ವಿಚಾರವಾಗಿ ವಿಪರೀತವಾಗಿ ಹೇಳಿದರು ಮತ್ತು ಅದಕ್ಕನುಗುಣವಾದ ಇತರ ಸನ್ನಿವೇಶಗಳನ್ನೂ ಬಹಳ ವಿವರಿಸಿದರು. ಒಂದು ವಿಷಾದವಾದ ಸಮಾಚಾರವೇನೆಂದರೆ, ನಿನ್ನೆ ಆಯುರ್ವೇದದ ಬಿಲ್ಲಿನ ಮೇಲೆ ಹೇಳುವುದಕ್ಕಿಂತ ಈ ಬಿಲ್ಲಿನ ಮೇಲೆ ಮಾತನಾಡುವಾಗ ಅಲೋಪತಿಕ್ ಪದ್ಧತಿಯ ವೈದ್ಯದ ಮೇಲೆ ಅವರ ಕೋಪ ಬಹಳ ಜಾಸ್ತಿಯಾಗಿದೆ.

ಯಾರು ಯಾವ ರೀತಿಯಾದ ವೈದ್ಯದ ಪದ್ಧತಿಯನ್ನೇ ಪ್ರಾಕ್ಟೀಸು ಮಾಡಲಿ, ಯಾವುದರಿಂದಲಾದರೂ ಸರಿ, ಮನುಷ್ಯನಿಗೆ ಬರುವ ಕಾಯಿಲೆಯು ವಾಸಿಯಾದರೆ ಸರಿ. ಅದು ಬಹಳ ಮುಖ್ಯವಾದದು. ಆಯುರ್ವೇದದ ಪದ್ಧತಿಯಲ್ಲಿ ಕೆಲವು ಪದಾರ್ಥಗಳನ್ನು ಸಂಶೋಧನೆ ಮಾಡಿ ಅದರಿಂದ ಜನರಿಗೆ ಉಪಯೋಗ ಮಾಡಿಕೊಡುತ್ತಿದ್ದರು. ಆಯುರ್ವೇದದಲ್ಲೇ ಸಿಂಕೋನ ಎನ್ನುವುದು ಬಹಳ ಒಳ್ಳೆಯದಾಗಿತ್ತು. ಆದರೆ ಇಲ್ಲಿ ಹೇಳುವಾಗ ಅಲೋಪತಿಕ್ ಪದ್ಧತಿ ಸರಿಯಲ್ಲ ಎಂದು ಬಹಳ ಪ್ರಚಾರ ಮಾಡುವುದು ಅಷ್ಟು ಸರಿಯಲ್ಲ. ಮೆಡಿಕಲ್ ಪ್ರೊಫೆಸನ್ನಿನ ವಿಚಾರದಲ್ಲಿ ನಾನು ಹೇಳಬೇಕಾಗಿದೆ. ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಇದರಲ್ಲೇ ಆಶೆ ಇಲ್ಲದಿದ್ದರೆ ಈ ಬಿಲ್ಲನ್ನು ತರುತ್ತಿರಲಿಲ್ಲ ಎಂದು ಹೇಳುವುದು ಸರಿಯಲ್ಲ. ಅವರು ಈ ಬಿಲ್ಲನ್ನು ತಂದು ಎಲ್ಲ ಜನಕ್ಕೂ ಅನುಕೂಲವಾಗಿದೆ ಎಂದು ಇಟ್ಟಿದ್ದಾರೆ ಈ ಬಿಲ್ಲಿನ Aim & objectsನ ಆಯುರ್ವೇದದ ಬಿಲ್ಲಿನಲ್ಲಿರುವಂತೆಯೇ ಇದನ್ನೂ ಕೂಡ ಎನ್‌ಕರೇಜು ಮಾಡಬೇಕು. ಇದನ್ನೇಕೆ ಸೇರಿಸಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಈ ರೀತಿ ಈ ಬಿಲ್ಲಿನಲ್ಲಿಯೂ ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು. ಡಾಕ್ಟರು ಹ್ಯಾನ್‌ವ್ಯೊಸ್ ಎನ್ನುವವರು ಎಷ್ಟೋ ತರಹದ ಔಷಧಿಗಳನ್ನು ಮಾಡಿ ಬಹಳ ಪ್ರಖ್ಯಾತರಾಗಿದ್ದರು ಎಂದು ಶ್ರೀ ಪುಟ್ಟಣ್ಣನವರು ಹೇಳಿದರು. ನಾನೂ ಸಹ ಡಾ. ಹ್ಯಾನ್‌ವ್ಯಾಸ್ ಎನ್ನುವವರ ಲೈಫ್ ಹಿಸ್ಟರಿಯನ್ನು ಪೂರ್ತಿಯಾಗಿ ಓದಿ ನೋಡಿದ್ದೇನೆ. ಅವರು ಹೇಳಿರುವ ಐಡಿಯಾ ನೋಡಿದರೆ ಉತ್ತಮವಾದ ಔಷಧಿಗಳನ್ನು ತಯಾರು ಮಾಡಿ ಹೊಸದಾಗಿ ಹೆಸರನ್ನೇನೂ ಹೇಳಲಿಲ್ಲ. ಅಲೋಪತಿಕ್ ಸಿಸ್ಟಂ ಆಫ್ ಮೆಡಿಸನ್ ಎನ್ನುವುದು ಹೋಮಿಯೋಪತಿಕ್ ಪದ್ಧತಿಯ ಬೈ-ಪ್ರಾಡಕ್ಟು ಎಂದು ಹೇಳಬಹುದು. ಆದರೆ ನಮ್ಮ ಹೋಮಿಯೋಪತಿ ಪದ್ಧತಿಯ ವಿಚಾರದಲ್ಲಿ ಡಿಗ್ರಿ ಪಡೆದವರಿಗಿಂತ ಹೆಚ್ಚಾಗಿ ಬಹಳವಾಗಿ ಈ ಬಗ್ಗೆ ಲಾಯರುಗಿರಿಯನ್ನೂ ಮಾಡಿದರು, ಹೋಮಿಯೋಪತಿಕ್ ಸಿಸ್ಟಂನಲ್ಲಿ ಬಹಳ ಮುಖ್ಯವಾಗಿ ಅಲೋಪತಿಕ್ ಸಿಸ್ಟಂನ್ನೂ ಅಭ್ಯಾಸ ಮಾಡುವುದಕ್ಕೆ, ಅನುಕೂಲವಾಗುವಂತೆ ಅಲ್ಲೇ ಒಂದು ರೀತಿಯಾದ ಸ್ಟಡಿ ಕೋರ್ಸಾಗಿ ಇಟ್ಟರೆ ಅದಕ್ಕೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ಬರುತ್ತದೆ. ಮತ್ತು ಇದರಿಂದ ಬಹಳ ಉಪಯೋಗವೂ ಆಗುತ್ತದೆ. ಆದರೆ ನಾನು ಹೋಮಿಯೋಪತಿಕ್ ಪದ್ಧತಿಯನ್ನು ನಾನು ತಪ್ಪಾಗಿ ಹೇಳುತ್ತೇನೆಂದು ಯಾರೂ ತಿಳಿದುಕೊಳ್ಳಬಾರದು. ಹೋಮಿಯೋಪತಿಕ್ ಪ್ರಾಕ್ಟೀಷನರುಗಳು ಡಿಗ್ರಿ ಪಡೆದು ಬಂದಾಗ ಅವರಿಗೆ ಸಾಕಷ್ಟು ಕ್ಲಿನಿಕಲ್ ನಾಲೆಡ್ಜ್ ಎಂದರೆ ಅನುಭವ ಇಲ್ಲ. ಸುಮ್ಮನೆ ಪದವಿಗಳನ್ನು ಪಡೆದುಕೊಂಡು ಡಾಕ್ಟರಾಗಿ ಬಂದರೆ ಅವರು ಸರಿಯಾದ ಡಾಕ್ಟರಾಗುವುದಿಲ್ಲ. ನಮ್ಮಲ್ಲಿ ಕಾಂಪೌಂಡರುಗಳೂ ಔಷಧಿಗಳನ್ನು ಡಾಕ್ಟರಿಲ್ಲದಾಗ ಕೆಲವು ವೇಳೆ ಕೊಡುತ್ತಾರೆ. ಹಾಗೆ ಇದರ ಪರಿಣಾಮವಾಗುತ್ತದೆ. ಇದರಲ್ಲಿ ಡಾಕ್ಟರಾಗಿ ಬರುವವರಿಗೆ ಪರಿಪೂರ್ಣವಾದ ಜ್ಞಾನವಿರಬೇಕು ಈ ಬಿಲ್ಲಿನಲ್ಲಿ ಕೆಲವು ಸಂಸ್ಥೆಗಳನ್ನು ಶಿಫಾರಸು ಮಾಡಿರುವುದು ಸೂಕ್ತವಾಗಿದೆ. ಇಂತಹ ಸಂಸ್ಥೆಗಳಿಂದ ಮೆಡಿಕಲ್ ಪ್ರಾಕ್ಟೀಷನರುಗಳನ್ನು ತಯಾರು ಮಾಡಿದರೆ ಬಹಳ ಉತ್ತಮವಾಗುತ್ತದೆ.

ನಮ್ಮ ಸರಕಾರದವರು ಒಂದು ರೀತಿಯಾದ ಕಂಟ್ರೋಲನ್ನು ಇಟ್ಟುಕೊಂಡು ಈ ಡಾಕ್ಟರುಗಳಿಗೆ ಒಂದು ತರಹದ Standardisation of Practice ಎಂದು ಮಾಡಿ ಈ ಪದ್ಧತಿಯ ಔಷಧಿಗಳ ಮೇಲೆ ಒಂದು ರೀತಿಯಾದ ರಿಸರ್ಚನ್ನು ಮಾಡುವಂತೆ ಇರಬೇಕು. ಆ ರೀತಿಯಾಗಿ ಈ ಬಿಲ್ಲಿನಲ್ಲಿ ಸೇರಿಸಿಲ್ಲ. ಬೇರೆ ಪದ್ಧತಿ ಸ್ಟಾಂಡರ್ಡ್ ಕಂಪನಿಗಳನ್ನು ಮಾಡಿ ಅಲ್ಲಿ ತಯಾರು ಆಗುವ ಔಷಧಿಗಳ ಮೇಲೆ ಒಂದು ತರಹದ ಕಂಟ್ರೋಲು ಇರಬೇಕು. ಶ್ರೀಮಾನ್ ಪುಟ್ಟಣ್ಣನವರು ಪಾಶ್ಚಿಮಾತ್ಯ ದೇಶಗಳಲ್ಲಿ ಈ ಹೋಮಿಯೋಪತಿ ಪದ್ಧತಿಗೆ ಬಹಳ ಪ್ರೋತ್ಸಾಹವಿದೆ ಎಂದು ಹೇಳಿದರು. ನಾನು ಈಗ ಐದಾರು ತಿಂಗಳ ಕೆಳಗೆ ಜರ್ಮನಿಗೆ ಹೋಗಿದ್ದೆ. ಅಲ್ಲಿಂದ ಹ್ಯಾಂಬರ್ಗ್, ಬರ್ಲಿನ್ ಡಸೆಲ್‌ಡಾರ್ಫ್ ಇನ್ನಿತರ ದೇಶಗಳಲ್ಲಿ ಹೋಗಿ ನೋಡಿ ಬಂದಿದ್ದೇನೆ. ನಾನು ಹೋದ ಕಡೆಗಳಲ್ಲೆಲ್ಲಾ ಎಲ್ಲಿಯೂ ಹೋಮಿಯೋಪತಿಕ್ ಪ್ರಾಕ್ಟೀಷನರಗಳ ಬೋರ್ಡನ್ನೇ ನಾನು ನೋಡಲಿಲ್ಲ ನಾನು

(ಡಾ. ಟಿ. ಪಾರ್ಥಸಾರಥಿ)

ಎಲ್ಲಿಗೆ ಹೋದರೂ ಅಲ್ಲಿರುವ ಆಸ್ಪತ್ರೆಗಳು ಹೇಗಿವೆ ಮತ್ತು ಕ್ಲಿನಿಕ್ಕುಗಳು ಹೇಗಿವೆ ಎನ್ನುವುದನ್ನು ನೋಡಿ ಬಂದಿದ್ದೇನೆ. ಅಲ್ಲಿ ಹೋಮಿಯೋಪತಿಕ್ ಪದ್ಧತಿಯು ಪ್ರಾಕ್ಟೀಷನರುಗಳಿಗೆ ಬಹಳವಾದ ಪ್ರಾಶಸ್ತ್ಯವಿರಲಲ್ಲ. ಶ್ರೀಮಾನ್ ಪುಟ್ಟಣ್ಣನವರು ಜರ್ಮನಿಗೆ ಹೋಗಿ ಬಂದು ನೋಡಿ ಇದನ್ನು ಹೇಳಿದರೆ ಆಗ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ಕ್ವಾಲಿಫಿಕೇಷನ್ನುಗಳನ್ನು ಕೊಡುವಾಗ ಕೆಲವು ಕಡೆ ಹೋಮಿಯೋಪತಿಕ್ ಪ್ರಾಕ್ಟೀಷನರುಗಳು M.D.H. ಮತ್ತು F.R.C.H.S. ಎಂದು ದೊಡ್ಡದಾಗಿ ಬೋರ್ಡುಗಳನ್ನು ಇಲ್ಲಿ ಹಾಕಿರುತ್ತಾರೆ. ಆದರೆ ಪರದೇಶಗಳಲ್ಲಿ ಇಷ್ಟು ದೊಡ್ಡದಾಗಿ ಹಾಕಿರುವುದಿಲ್ಲ. ಅದು ಬಹಳ ಚಿಕ್ಕದಾಗಿರುತ್ತದೆ. ಈ ರೀತಿ ದೊಡ್ಡದಾಗಿ ಬೋರ್ಡನ್ನು ಹಾಕಿಕೊಳ್ಳುವುದಕ್ಕೆ ಬದಲಾಗಿ ಈ ಪ್ರಾಕ್ಟೀಷನರುಗಳು ಎಲ್ಲಿ ರಿಜಿಸ್ಟರು ಮಾಡಿಕೊಂಡು ಬಂದಿದ್ದಾರೆ ಎನ್ನುವುದನ್ನು ಹಾಕಿದರೆ ಅದು ಬಹಳ ಜನಕ್ಕೆ ಉಪಯೋಗವಾಗುತ್ತದೆ. ನಾನು ಅಮೇರಿಕಾ ದೇಶದಲ್ಲಿ ಹೋಗಿ ಒಂದು ದೊಡ್ಡ ಆಸ್ಪತ್ರೆಯಲ್ಲಿ ಹೋಗಿ ಒಬ್ಬ ಡಾಕ್ಟರನ್ನು ಕೇಳಿದಾಗ ಅವರು ನನಗೆ ಈ ರೀತಿ ಹೇಳಿದರು.

> "What you know and what you can do is our criterion.
> What you can next claim is not our criterion".

ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು ಆ ರೀತಿ ಇರಬೇಕು ಎಂದು ಹೇಳುತ್ತಾ ಈ ಬಿಲ್ಲನ್ನು ನಾನು ಅನುಮೋದಿಸಿ ಸ್ವಾಗತಿಸುತ್ತೇನೆ. ನಾನಾಗಲೇ ಹೇಳಿದಂತೆ ಇದರ ಉದ್ದೇಶಗಳಲ್ಲಿ ಸಾಕಷ್ಟು ಉತ್ತೇಜನ (encouragement) ಇರುವಂತೆ ಸೇರಿಸಬೇಕು. ಆ ರೀತಿ ನಮ್ಮ ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ನಂಬುತ್ತೇನೆ.

Sri B. R. SUNTHANKAR (Belgaum City).—Mr. Speaker, Sir, this is a welcome measure. So far, only in the Bombay Area this Homeopathy legislation was in force. Now, this Bill seeks to extend it to the whole of the Mysore State. This Bill is restricted only to the Homoeopathic Practitioners. As has been rightly pointed out by my friend Dr. Parthasarathy, this Bill provides only for registration and there are no provisions regarding the encouragement and development of Homoeopathy. So, the Government should also take up in right earnestness this matter of encouragement and development of Homeopathy.

The second suggestion which I wish to make is that this Bill should include also another system of medicine which is equally important and that is Bio-chemistry. This system was founded by Dr. Schuster. An amendment in this respect has been moved by my friend Sri Rasheed and I would request the Government to accept it because this Bio-chemistry is also an equally important system of medicine. No system is perfect; every system has got its limitations. Even if Allopathy is so very popular nowadays, it is not a perfect system and it has got its limitations. Allopathy, Unani, Ayurveda, Homeopathy and Bio-chemistry are all in my opinion supplementary and complementary to each other. So, this Bill should include Bio-chemistry also which is equally important and equally scientific.

Then, I wish to point out two or three things about this Bill. The first is about the Homeopathic Board. It is provided that the President of this Board shall be appointed by the State Government for the first five years. I do not understand why there should be appointment of the President. The Board will be there and the members of the Board will be competent enough to elect their own President. Of course, after five years they will elect their own President. But I do not understand why Government find it necessary to appoint him in the first instance. Such Boards are in existence in other States and I do not think that it is necessary that the appointment of the President should be made by the Government. So, this provision should be omitted and the Board should be allowed to elect its own President for the first term also.

Then, as regards the election of members, it is provided in Clause 5 (2) that all elections under this Act shall be held according to the distributive system of voting. But the last proviso in this clause is high objectionable and is an encroachment on the right of the voter. Suppose a voter has got five votes and if he exercises only four votes, according to this proviso simply because he has not exercised his fifth vote, all the four votes will be invalid. So, in effect, his voting right is taken away. A voter is at licerty to exercise any number of votes.

Sri K. K. HEGDE.—Suppose five members stand for election out of which Mr. Sunthankar is one. If all the members vote only for Sunthankar, only Sri Sunthankar will be elected. The other four members will not be elected.

Sri B. R. SUNTHANKAR.—That is the choice of the voters. This is highly objectionable and against the very basis of the voting system.

Then, Income to Clause 12 which deals with the time and place of meetings of the Board. A provision should be made here that the Board should meet at least once a quarter. Otherwise, the Board may not meet at all.

Then, Clause 36 (l) (c) provides that the Board may make regulations for the language in which the examinations shall be conducted and instruction shall be given. I would request the Government to give due regard to the languages of the minorities in the State, Particularly I speak about the Marathi language because in Maharashtra the course is in Marathi and examinations are being held in Marathi.

Sri K. K. HEGDE.—Why should you presume that Marathi will be ignored? You can yourself start a college with Marathi language as the medium of instruction and we will give reccgnition to it.

Sri B. R. SUNTHANKAR.—With these words, I conclude.

†Sri D. ABDUL RASHEED (Kolar).— Mr. Speaker, Sir, I rise to support this Bill which is brought by the Government to accord recognition to the system of Medicine called Homeopathy and its practitioners. It was a long-cherished desire of the practitioners of this sytem of medicine of Mysore State to see that this system is recognised and the practitioners of this system are registered. This system of medicine is recognised in foreign countries like Germany, France, England America. It is also recognised in India by all the States except Madras and Mysore. We are very fortunate that Mysore Government have at least brought this Bill and that they are going to give statutory recognition to this system and its practitioners. Homeopathy system of medicine was evolved out of allopathic system. The allopathic system of medicine is called the modern system of medicine but strictly speaking, allopathic was the older system and homeopathy was evolved out of allopathic system by a physician who was qualified in allopathic system of medicine. This modern system of medicine got its name after the homeopathic system came into existence. Allopathy means counter affections and homeopathy means like or similar affections.

4-30 P. M.

Homeopathic system is based on the philosophy called in German *Similia Similibus curanteur*, *i.e.*, let like be cured by like. That means, the drug which when administered in massive doses to a healthy human being produce a group of morbid symptoms, removes the similar group of symptoms when found in a diseased individual, if administered in small or infinitesimal doses. It is also a science based on the natural law of cure. It is a system based on the pharmaco-theraupatics. Homeopthy also observes all the clinical or pre-clinical science but the thing is, that the persons are not educated. Homeopathy has not been recognised in Mysore and that is why we find so many practitioners who have no pre-clinical training in those subjects. As this Bill contemplates, in future the practitioners will get their training in a college. So, immediately this Bill is enacted into a law, I request the Government to establish colleges so that the practitioners who are enlisted in part C of clause 17 may get their training as early as possible.

But in the course of studies mentioned in the schedule a student is expected to study pharmocology of important allopathic, unani and ayurvedic drugs. This is not at all necessary because he is not expected to enter into any other system except homeopathy. He is expected to use and prescribe only homeopathy drugs. So, it is not at all necessary to study pharmocology of important medicines of other systems. It will be a great burden if those subjects are included in the courses of studies. I request the Hon'ble minister to consider these things and see that they are eliminated from the courses of studies. With these remarks I thank the Speaker for giving me an opportunity to speak. I wanted to speak more about homeopathy but unfortunately for want of time, I cannot do that.

† ಶ್ರೀ ಕೆ. ಪಿ. ರೇವಣ್ಣಪ್ಪ (ತಿಪಟೂರು).—ಅಧ್ಯಕ್ಷರೇ ನಮ್ಮ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಇಲ್ಲಿಗೆ 14 ವರ್ಷಗಳಾಯಿತು. ಆದರೆ ಇವರು ಇಲ್ಲಿಯತನಕ ಈ ಔಷಧಿಗಳ ವಿಚಾರಕ್ಕೆ ಅಷ್ಟು ಗಮನ ಕೊಟ್ಟಿರಲಿಲ್ಲ. ಆದರೆ ಈ ಆಡಳಿತ ಪಕ್ಷ ಇಲ್ಲಿಯತನಕ ಮಾಡದಿರುವುದನ್ನೆಲ್ಲ ಮಾಡಿ ಈಗ ಅನೇಕ ನಮೂನೆ ಚಿಕಿತ್ಸೆಗಳ ಕಡೆಗೆ ಗಮನ ಕೊಡುತ್ತಿರುವುದು ನಿಜವಾಗಿಯೂ ಬಹಳ ಸಂತೋಷದ ವಿಚಾರ ಈಗ ಸರ್ಕಾರ ನಮ್ಮ ದೇಶ ಪದ್ಧತಿಗನುಸರಿಸಿ ಕಾಯ ಕಲ್ಪ ಚಿಕಿತ್ಸೆ ಇತ್ಯಾದಿಗಳನ್ನೆಲ್ಲಾ ತೆಗೆದು ಕೊಳ್ಳುವುದಕ್ಕೆ ಹೊರಟಿದ್ದಾರೆ. ಈ ಕಾಯ ಕಲ್ಪ ತಯಾರಿಸತಕ್ಕವರ ಕ್ವಾಲಿಫಿಕೇಷನ್ ಏನೆಂದರೆ ಅವರ ಹೆಸರೇ ಬಹಳ ದೊಡ್ಡದು ಅವರ ಹೆಸರು ದುರ್ಗದತ್ತ ಶರ್ಮ ಎಂತ ಇವರು ತಯಾರಿಸುವ ಕಾಯ ಕಲ್ಪಕ್ಕೆ ದುರ್ಗದತ್ತ ಶರ್ಮ ಕಾಯ ಕಲ್ಪ ಎಂತ ಹೇಳುತ್ತಾರೆ ಇವರ ಕ್ವಾಲಿಫಿಕೇಷನ್ ಏನೆಂದರೆ ಇವರು ಏರೋಪ್ಲೇನಿನಲ್ಲೇ ಬರುತ್ತಾರಂತೆ ಏರೋಪ್ಲೇನಿನಲ್ಲೇ ಹೋಗುತ್ತಾರಂತೆ ? ಇದೇ ಅವರ ಕ್ವಾಲಿಫಿಕೇಷನ್ ಇವರು ಎಂಥ ಕಾಯಿಲೆಗಾದರೂ ಔಷಧಿ ಕೊಡುತ್ತಾರಂತೆ? ಕೆಲವರು ಈಗ ಏನು ಮಾಡುತ್ತಿದ್ದಾರೆಂದರೆ ಅಲೋಪಥಿಕ್ ಕೆಲವು ಔಷಧಿ ಗುಳಿಗೆಗಳನ್ನು ತೆಗೆದು ಕೊಂಡು ಅವುಗಳನ್ನು ಪುಡಿಮಾಡಿ, ಹಳ್ಳಿಗಳ ಕಡೆ ಇದು ಬಂಗಾರದ ಭಸ್ಮ, ಬೆಳ್ಳಿ ಭಸ್ಮ ಎಂತ ಹೇಳಿ ಜನರನ್ನು ಮೋಸಮಾಡುತ್ತಿದ್ದಾರಂತೆ ಇವರಲ್ಲೇ ಕೆಲವರು ಇತ್ತೀಚೆಗೆ ಇಂಥ ವೈದ್ಯ ಶಾಸ್ತ್ರದ ಜೊತೆಗೆ ಜ್ಯೋತಿಷ್ಯ ಹಸ್ತ ಸಾಮುದ್ರಿಕಾ ಶಾಸ್ತ್ರವನ್ನು ಸೇರಿ ಇಟ್ಟು ಕೊಂಡು ಜನರನ್ನು ಮರುಳು ಮಾಡುತ್ತಿದ್ದಾರಂತೆ ನಮ್ಮ ಕೆಲವು ರಾಜಕಾರಿಣಿಗಳಿಗೆ ಈ ಜನರಲ್ಲಿ ಎಂದರೆ ಈ ಹಸ್ತ ಸಾಮುದ್ರಿಕೆ ಹೇಳತಕ್ಕ ಜನರಲ್ಲಿ ಇತ್ತೀಚೆಗೆ ಬಹಳ ವಿಶ್ವಾಸ ಮೂಡಿದೆಯಂತೆ! ಆದರೆ ಇವರು ಕೊಡತಕ್ಕ ಔಷಧಿ ಒಂದಾದರೆ ರೋಗಿಯ ಕಾಯಿಲೆ ಇನ್ನೊಂದಾಗಿರುತ್ತಂತೆ ಇತ್ತೀಚೆಗೆ ಹಳ್ಳಿಗಳ ಕಡೆ ಕೆಲವರು ಕಾಂಪೌಂಡರುಗಳು ಡಿಸ್ಟಿಲ್ಡ್ ವಾಟರ ಇಂಜೆಕ್ಷನ್ ಕೊಟ್ಟು 5-6 ರೂ ಗಳನ್ನು ವಸೂಲ್ ಮಾಡುತ್ತಿದ್ದಾರಂತೆ ಇಂಥ ಅನ್ಯಾಯಗಳು ನಡೆಯುತ್ತಿರುವ ಈ ಕಾಲಕ್ಕೆ ಇಂಥ ಬಿಲ್ಲುಗಳ ಅವಶ್ಯಕತೆ ಬಹಳವಾಗಿದೆ ಈ ಬಿಲ್ಲನ್ನು ಶಾಸನಕಡತಕ್ಕೇರಿಸಿ ಆಚರಣೆಗೆ ತರುವಾಗ ಇವರು ಕೊಡತಕ್ಕ ಔಷಧಿ ಯಾವ ತರಹ ಇರುತ್ತೆ ಅದನ್ನು ಹೇಗೆ ತಯಾರಿಸುತ್ತಾರೆ ರೋಗಕ್ಕೆ ತಕ್ಕ ಔಷಧಿ ಕೊಡುತ್ತಿದ್ದಾರೆಯೋ ಎಂಬುದನ್ನೆಲ್ಲಾ ಚೆನ್ನಾಗಿ ಪರೀಕ್ಷೆಮಾಡಿ ಅವರಿಗೆ ಲೈಸೆನ್ಸ್ ಕೊಡಬೇಕೇ ವಿನಾ ಹಾಗಿಲ್ಲದೆ ಏನೋ ಅತ ಯಾರಬಳಿಯಲ್ಲೋ 10 ವರ್ಷ ಕಾಂಪೌಂಡರ್ ಕೆಲಸಮಾಡಿ ಕೊಂಡಿದ್ದಾನೆಂದು ಹೇಳಿ ಅವರಿಗೆಲ್ಲ ಲೈಸೆನ್ಸ್ ಕೊಡುವುದು ಯುಕ್ತವಲ್ಲ ನೋಡಿ ಕೊಂಡು ಬಹಳ ಎಚ್ಚರಿಕೆಯಿಂದ ಈ ಬಿಲ್ಲನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

†Sri K. K. HEGDE (Minister for Health).—Mr. Speaker from the trend of discussion I can very well understand that there is not much opposition and this Bill has been welcomed. I know there has been some complaint about the delay. I admit that there has been some delay in bringing forward such a legislation. But, due to unavoidable reasons this could not be brought before this House earlier.

I think all the members are aware that the main purpose of this Bill is, registration, regularisation and encouragement to be given to those who practice this system of medicine and give them a statutory recognition. It is also intended more to avoid quackery in the State. Though late, we have tried to put a stop to this quackery system prevailing in several parts of the State. I think the members are aware that the Government have been a bit liberal to those people. I know my friends like C. M. Arumugham and Sri G. N. Puttanna have argued that we should be strict in recognising the people. They have argued

(Sri K. K. Hegde)

that unless a person is qualified and has institutional training, he should not be recognised. I agree; but when a legislation of this type is coming for the first time, the Government thought that it should be a little generous. I hope my friends will agree and? appreciate the Government's intention.

